**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**UNIVERSITY OF AGRICULTURAL SCIENCES, BANGALORE**

# ಐವತ್ತಾರನೇ ಘಟಿಕೋತ್ಸವ
# ಸ್ವಾಗತ ಭಾಷಣ ಹಾಗೂ ಸಂಕ್ಷಿಪ್ತ ವರದಿ

# Fifty Sixth Convocation
# Welcome Speech and Brief Report

**09-09-2022**

## ಐವತ್ತಾರನೇ ಘಟಿಕೋತ್ಸವ
## ಸ್ವಾಗತ ಭಾಷಣ ಹಾಗೂ ಸಂಕ್ಷಿಪ್ತ ವರದಿ

**ಸನ್ಮಾನ್ಯ ಕುಲಾಧಿಪತಿಗಳೇ, ಸಹಕುಲಾಧಿಪತಿಗಳೇ, ಪ್ರತಿಷ್ಠಿತ ಮುಖ್ಯ ಅತಿಥಿಗಳೇ, ಗೌರವ ಡಾಕ್ಟರೇಟ್ ಪುರಸ್ಕೃತರೇ, ಆಡಳಿತ ನಿರ್ವಹಣಾ ಮಂಡಳಿ ಸದಸ್ಯರೇ, ಶೈಕ್ಷಣಿಕ ಪರಿಷತ್ತಿನ ಸದಸ್ಯರೇ, ಹಾಲಿ ಹಾಗೂ ವಿಶ್ರಾಂತ ಕುಲಪತಿಗಳೇ, ಪದಕಗಳ ದಾನಿಗಳೇ, ಪ್ರತಿಷ್ಠಿತ ಆಹ್ವಾನಿತರೇ, ಅಧಿಕಾರಿಗಳೇ ಹಾಗೂ ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಗಳೇ, ಈ ವರ್ಷ ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳೇ, ಮಾಧ್ಯಮದ ಪ್ರತಿನಿಧಿಗಳೇ, ಮಹಿಳೆಯರೇ ಮತ್ತು ಮಹನಿಯರೇ,**

**ಆಡಳಿತ ನಿರ್ವಹಣಾ ಮಂಡಳಿಯ, ಶೈಕ್ಷಣಿಕ ಪರಿಷತ್ತಿನ ಸದಸ್ಯರ ಪರವಾಗಿ ಹಾಗೂ ವೈಯಕ್ತಿಕವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 56ನೇ ಘಟಿಕೋತ್ಸವ ಸಮಾರಂಭಕ್ಕೆ ತಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸಲು ನನಗೆ ಹೆಮ್ಮೆಯೆನ್ನಿಸುತ್ತದೆ.**

ಕರ್ನಾಟಕ ಸರ್ಕಾರದ ಗೌರವಾನ್ವಿತ ರಾಜ್ಯಪಾಲರು ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳೂ ಆದ ಸನ್ಮಾನ್ಯ ಶ್ರೀ **ಥಾವರ್ ಚಂದ್ ಗೆಹ್ಲೋಟ್** ಅವರು, ಇಂದಿನ ಘಟಿಕೋತ್ಸವ ಸಮಾರಂಭದ ಅಧ್ಯಕ್ಷರಾಗಿ ಪದವಿಗಳನ್ನು ಪ್ರದಾನಮಾಡಲು ಒಪ್ಪಿ, ಈ ದಿನ ಇಲ್ಲಿಗೆ ಆಗಮಿಸಿ ನಮ್ಮೊಂದಿಗಿರುವುದು ಹೆಮ್ಮೆಯ ವಿಷಯವಾಗಿದೆ.

ಶ್ರೀ ಥಾವರ್ ಚಂದ್ ಗೆಹ್ಲೋಟ್‌ರವರು 18ನೇ ಮೇ, 1948ರಂದು ಜನಿಸಿದರು. 2021ರ ಜುಲೈ 11ರಂದು ಕರ್ನಾಟಕದ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡರು. ಇವರು ಮಧ್ಯಪ್ರದೇಶದ ಉಜ್ಜೈನಿಯ ವಿಕ್ರಮ್ ವಿಶ್ವವಿದ್ಯಾಲಯದಿಂದ ಬ್ಯಾಚುಲರ್ ಆಫ್ ಆರ್ಟ್ಸ್ ಪದವಿಯನ್ನು ಪೂರೈಸಿದರು. ಇವರಿಗೆ ಡಾ. ಬಿ.ಆರ್. ಅಂಬೇಡ್ಕರ್ ಸಾಮಾಜಿಕ ವಿಜ್ಞಾನ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ನೀಡಲಾಗಿದೆ. ಇವರು ಮಧ್ಯಪ್ರದೇಶ ರಾಜ್ಯವನ್ನು ಪ್ರತಿನಿಧಿಸುವ ಭಾರತೀಯ ಸಂಸತ್ತಿನ ಮೇಲ್ಮನೆ ರಾಜ್ಯ ಸಭೆಯ ಸದಸ್ಯರಾಗಿದ್ದರು. ಇವರು 2014ರಿಂದ 2021ರವರೆಗೆ ಭಾರತ ಸರ್ಕಾರದಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ಭಾರತೀಯ ಸಂಸತ್ತಿನ ಮೇಲ್ಮನೆಯ ಸಭಾ ನಾಯಕರಾಗಿದ್ದರು.

**ಸನ್ಮಾನ್ಯರೇ, ತಾವು ಈ ಘಟಿಕೋತ್ಸವಕ್ಕೆ ಆಗಮಿಸಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ. ತಮ್ಮನ್ನು ವಿಶ್ವವಿದ್ಯಾನಿಲಯದ 56ನೇ ಘಟಿಕೋತ್ಸವ ಸಮಾರಂಭಕ್ಕೆ ಅತ್ಯಂತ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.**

ಕರ್ನಾಟಕ ಸರ್ಕಾರದ ಕೃಷಿ ಸಚಿವರಾಗಿರುವ ಹಾಗೂ ವಿಶ್ವವಿದ್ಯಾನಿಲಯದ ಸಹಕುಲಾಧಿಪತಿಗಳಾಗಿರುವ ಸನ್ಮಾನ್ಯ ಶ್ರೀ **ಬಿ.ಸಿ. ಪಾಟೀಲ್**ರವರು ಘಟಿಕೋತ್ಸವ ಸಮಾರಂಭದಲ್ಲಿ ಉಪಸ್ಥಿತರಿರುವುದು ನಮಗೆಲ್ಲರಿಗೂ ಹರ್ಷವನ್ನು ತಂದಿದೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಯಲಿವಾಲ ಗ್ರಾಮದಲ್ಲಿ 1956ರ ನವೆಂಬರ್ 14ರಂದು ಜನಿಸಿದ ಶ್ರೀಯುತರು ತಮ್ಮ ಶಿಕ್ಷಣವನ್ನು ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಪೂರೈಸಿದರು.

ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಯಾಗಿ ಸುಮಾರು ಎರಡು ದಶಕಗಳ ಕಾಲ ಕರ್ನಾಟಕ ರಾಜ್ಯ ಪೋಲೀಸ್ ಇಲಾಖೆಯಲ್ಲಿ ಉನ್ನತ ಸ್ಥಾನಗಳಲ್ಲಿ ಸೇವೆ ಸಲ್ಲಿಸಿದ್ದಾರೆ ಮತ್ತು ಅತ್ಯುತ್ತಮ ಚಿತ್ರನಟರೂ ಆಗಿರುವ ಶ್ರೀಯುತರು 25ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ್ದಾರೆ ಹಾಗೂ ಅವರ ಅಭಿಮಾನಿಗಳು ಇಂದಿಗೂ ಅವರನ್ನು ಅವರ 'ಕೌರವ' ಸಿನಿಮಾದ ಪಾತ್ರಕ್ಕಾಗಿ ಸ್ಮರಿಸುತ್ತಾರೆ. ಶ್ರೀಯುತರು ಸಕ್ರಿಯ ರಾಜಕಾರಣಿಯಾಗಿದ್ದು, ಹಿರೇಕೆರೂರು ಕ್ಷೇತ್ರವನ್ನು 2004, 2008, 2018 ಮತ್ತು 2019ರಲ್ಲಿ ಪ್ರತಿನಿಧಿಸಿದ್ದಾರೆ. ಶ್ರೀಯುತರು ಆನ್‌ಲೈನ್ ಬೆಳೆ ಸಮೀಕ್ಷೆ ಆಪ್ (ರೈತರ ಬೆಳೆ ಸಮೀಕ್ಷೆ ಆಪ್), ಕೃಷಿ ಯಂತ್ರೋಪಕರಣಗಳ ಸೇವೆಗಳು, ಹವಾಮಾನಚತುರ ಕೃಷಿಯ ಉತ್ತೇಜನ, ಸಮಗ್ರ ಕೃಷಿ ಪದ್ಧತಿಯಂತಹ ಹಲವಾರು ನವೀನ ಮತ್ತು ಅಭಿವೃದ್ಧಿ ಕೇಂದ್ರಿತ ಕಾರ್ಯಕ್ರಮಗಳ ರೂವಾರಿಯಾಗಿದ್ದಾರೆ ಹಾಗೂ ಇವುಗಳ ಮೂಲಕ ಆಹಾರೋತ್ಪಾದನೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ರೈತರ ಅವಶ್ಯಕತೆಗಳನ್ನು ಅರಿತು ಅವುಗಳನ್ನು ಪರಿಹರಿಸಲು ಇತ್ತೀಚೆಗೆ 'ರೈತರೊಂದಿಗೆ ಒಂದು ದಿನ'

# Fifty Sixth Convocation
# Welcome Speech and Brief Report

**Hon'ble Chancellor, Hon'ble Pro-Chancellor, Distinguished Chief Guest, Honorary Doctorate Awardee, Members of Board of Management, Members of Academic Council, the present and former Vice-Chancellors and Officers of Farm Universities, Donors of Medals, Distinguished Invitees, Officers and Faculties of the University, Graduating Students, Representatives of Media, Ladies and Gentlemen.**

**On behalf of the Board of Management, Academic Council and on my own behalf, I feel immensely privileged to extend a warm welcome to each one of you present here on this occasion of the 56th Convocation of the University of Agricultural Sciences, Bangalore.**

It is a matter of pride to have with us **Shri Thaawar Chand Gehlot,** the Hon'ble Governor of Karnataka and Chancellor of the University of Agricultural Sciences, Bangalore, who has kindly consented to preside over the convocation and confer the degrees.

Shri Thaawar Chand Gehlot was born on 18th May 1948 and serving as 19th Governor of Karnataka from July 11, 2021. He completed his Bachelor of Arts degree from Vikram University, Ujjain, Madhya Pradesh. He was awarded Honorary Doctorate by Dr. B.R. Ambedkar University of Social Sciences, Indore, Madhya Pradesh. He was a member of the Rajya Sabha, Upper House of Indian Parliament representing the state of Madhya Pradesh. He served as the Minister of Social Justice and Empowerment, Governament of India from 2014 to 2021. He was also the Leader of the House in the Upper House of Parliament.

**Sir, we are honoured by your gracious presence on this great occasion of our Convocation. I heartily extend a very warm welcome to you for the 56th Convocation of University of Agricultural Sciences, Bangalore.**

We are gratified to have with us **Shri B. C. Patil**, Hon'ble Minister for Agriculture, GoK and Pro-Chancellor of the University. Born in Yalivala village, SorabaTaluk, Shivamogga District on 14th November, 1956, he completed his education in Shivamogga and Davanagere districts.

He has served in higher positions in the Karnataka State Police Department for nearly two decades as honest and strict officer. He is also an excellent film actor and has acted in more than 25 kannada films, which even today are remembered by his fans for his role in the film "Kourava". He is an active politician representing Hirekerur Legislative Constituency four times during 2004, 2008, 2018 and 2019. He is the architect of several innovative cum development programmes in the farming sector like, Online Crop Survey App, Farm Machinery Services to farmers, Promotion of Climate Smart Agriculture, Integrated Farming System which have driven the state's food production to a higher scale. He also introduced 'Raitarondinge Ondu Dina' to understand and address the needs and

ಕಾರ್ಯಕ್ರಮವನ್ನು ಅವರು ಪರಿಚಯಿಸಿದರು. ಮಾನ್ಯ ಕೃಷಿ ಮಂತ್ರಿಗಳು ಸ್ನಾತಕ ಕೃಷಿ ಪದವಿಯ ಪ್ರವೇಶಕ್ಕೆ ಕೃಷಿಕರ ಮೀಸಲಾತಿಯನ್ನು ಶೇ.40ರಿಂದ 50ಕ್ಕೆ ಹೆಚ್ಚಿಸಲು ಕಾರಣೀಭೂತರಾಗಿರುತ್ತಾರೆ. ಇತ್ತೀಚಿಗೆ, ಅವರು ಕೃಷಿ ತಂತ್ರಜ್ಞಾನಗಳ ವಿನಿಮಯದ ಸಾಧ್ಯತೆಗಳಿಗಾಗಿ ಯುರೋಪಿಯನ್ ದೇಶಗಳ ಹಲವು ಅಂತರಾಷ್ಟ್ರೀಯ ಸಂಸ್ಥೆಗಳಿಗೆ ಭೇಟಿ ನೀಡಿರುತ್ತಾರೆ. ಅದರಲ್ಲಿ ಪ್ರಮುಖವಾಗಿ ಬಯೋಫೇಸ್ ವಿಶ್ವ ಸಾವಯವ ವ್ಯಾಪಾರ ಮೇಳ, ನ್ಯೂರೆಂಬರ್ಗ್, ಜರ್ಮನಿ (26–29 ಜುಲೈ, 2022); FiBL, ಸಾವಯವ ಕೃಷಿ ಸಂಶೋಧನಾ ಸಂಸ್ಥೆ, ಫ್ರಿಕ್, ಸ್ವಿಟ್ಜರ್ಲ್ಯಾಂಡ್ (1–2 ಆಗಸ್ಟ್, 2022); ಆಹಾರ ಮತ್ತು ಕೃಷಿ ಸಂಸ್ಥೆ (FAO), ರೋಮ್, ಇಟಲಿ; ಕೃಷಿ ಅಭಿವೃದ್ಧಿಗಾಗಿ ಅಂತರಾಷ್ಟ್ರೀಯ ನಿಧಿ (IFAD), ರೋಮ್, ಇಟಲಿ ಮತ್ತು ವಿಶ್ವ ಆಹಾರ ಕಾರ್ಯಕ್ರಮ (WFP), ರೋಮ್, ಇಟಲಿ ಮತ್ತು ಮುಂತಾದವು.

**ಮಾನ್ಯರೆ, ಕೃಷಿ ವಿಶ್ವವಿದ್ಯಾನಿಲಯದ ಪರವಾಗಿ ತಮ್ಮನ್ನು 56ನೇ ಘಟಿಕೋತ್ಸವಕ್ಕೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ.**

**ಡಾ. ರಾಜೇಂದ್ರ ಸಿಂಗ್ ಪರೋಡ,** ವಿಶ್ರಾಂತ ಮಹಾ ನಿರ್ದೇಶಕರು, ಭಾರತೀಯ ಕೃಷಿ ಅನುಸಂಧಾನ ಪರಿಷತ್ ಮತ್ತು ಕಾರ್ಯದರ್ಶಿ, ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ ಇವರು ಮಹಾನ್ ಸಾಧನೆಯ ವಿಜ್ಞಾನಿಯಾಗಿ, ಸಮರ್ಥ ಸಂಶೋಧನಾ ಆಡಳಿತಗಾರರಾಗಿ ಮತ್ತು ಅಭಿವೃದ್ಧಿ ಪರಿಪಾಲಕರಾಗಿ ಒಂದು ವಿಶಿಷ್ಟ ದೃಷ್ಟಿಕೋನವನ್ನು ಹೊಂದಿದ್ದಾರೆ. ಶ್ರೀಯುತರು ಭಾರತದ ರಾಷ್ಟ್ರೀಯ ಕೃಷಿ ಸಂಶೋಧನಾ ವ್ಯವಸ್ಥೆಯನ್ನು ಆಧುನೀಕರಣ ಹಾಗೂ ಸದೃಢಗೊಳಿಸಿದವರೆಂದು ಖ್ಯಾತಿ ಗಳಿಸಿದವರು. ಭಾರತ ಸರ್ಕಾರವು ಅವರ ಅಮೂಲ್ಯ ಕೊಡುಗೆಗಳನ್ನು ಗುರುತಿಸಿ ಅವರಿಗೆ ಪ್ರತಿಷ್ಠಿತ ರಾಷ್ಟ್ರೀಯ ಪದ್ಮ ಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಶ್ರೀಯುತರು ರಫಿ ಅಹಮದ್ ಕಿದ್ವಾಯಿ ಪುರಸ್ಕಾರ, ಭಾರತೀಯ ಕೃಷಿ ಅನುಸಂಧಾನ ಪರಿಷತ್ ತಂಡ ಸಂಶೋಧನಾ ಪ್ರಶಸ್ತಿ, ಎಫ್.ಐ.ಸಿ.ಸಿ.ಐ. ಪ್ರಶಸ್ತಿ, ಓಂ ಪ್ರಕಾಶ್ ಭಾಸಿನ್ ಪ್ರಶಸ್ತಿ, ಬಿ.ಪಿ. ಪಾಲ್ ಚಿನ್ನದ ಪದಕ, ಬೋರ್ಲಾಗ್ ಪ್ರಶಸ್ತಿ, ಮಹೇಂದ್ರ ಶಿರೋಮಣಿ ಪ್ರಶಸ್ತಿ, ಎ.ಬಿ. ಜೋಷಿ ಪ್ರಶಸ್ತಿ, ಯು.ಎಸ್. ಅವಸ್ಥಿ–ಇಫ್ಕೊ ಪ್ರಶಸ್ತಿ ಮತ್ತು ಎಂ.ಎಸ್. ಸ್ವಾಮಿನಾಥನ್ ಪ್ರಶಸ್ತಿಗಳನ್ನೊಳಗೊಂಡಂತೆ ಹಲವಾರು ಪ್ರಶಸ್ತಿ ಮತ್ತು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಇವರು ಭಾರತ ವಿಜ್ಞಾನ ಕಾಂಗ್ರೆಸ್ (2011) ಮತ್ತು ಕೃಷಿ ವಿಜ್ಞಾನಗಳ ರಾಷ್ಟ್ರೀಯ ಅಕಾಡೆಮಿಯ (1997–2000) ಅಧ್ಯಕ್ಷರಾಗಿಯೂ ಸಹ ಸೇವೆ ಸಲ್ಲಿಸಿದ್ದಾರೆ. ಹತ್ತೊಂಭತ್ತು ವಿಶ್ವವಿದ್ಯಾನಿಲಯಗಳು ಶ್ರೀಯುತರಿಗೆ ಡಿ.ಎಸ್.ಸಿ. (*ಹಾನೊರಿಸ್ ಕಾಸಾ*) ಪದವಿ ಪುರಸ್ಕಾರ ನೀಡಿ ಗೌರವಿಸಿವೆ. ಅವರು ಭಾರತದಲ್ಲಿನ ಎಲ್ಲಾ ವಿಜ್ಞಾನ ಅಕಾಡೆಮಿಗಳ, ಮೂರನೇ ರಾಷ್ಟ್ರಗಳ ವಿಜ್ಞಾನಗಳ ಅಕಾಡೆಮಿಯ, ಕೃಷಿ ವಿಜ್ಞಾನಗಳ ರಷಿಯನ್ ಅಕಾಡೆಮಿಯ, ಅರ್ಮೇನಿಯಾ, ಜಾರ್ಜಿಯಾ ಮತ್ತು ತಜಿಕಿಸ್ತಾನದ ಕೃಷಿ ಅಕಾಡೆಮಿಗಳ ಫೆಲೋ ಆಗಿದ್ದಾರೆ ಮತ್ತು ಬೆಳೆ ವಿಜ್ಞಾನಗಳ ಅಮೆರಿಕನ್ ಸಂಘಗಳ ಹಾಗೂ ಬೇಸಾಯ ಶಾಸ್ತ್ರದ ಅಮೆರಿಕನ್ ಸಂಘದ ಗೌರವ ಸದಸ್ಯರಾಗಿದ್ದಾರೆ.

ಡಾ. ಪರೋಡಾರವರು 2007–12ರವರೆಗೆ ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆ, ರೋಮ್‌ನಲ್ಲಿ ಸ್ಥಿತವಿರುವ ಕೃಷಿ ಸಂಶೋಧನೆಯ ಜಾಗತಿಕ ವೇದಿಕೆಯ (GFAR) ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ಶ್ರೀಯುತರು ಎರಡು ದಶಕಗಳಿಗೂ ಹೆಚ್ಚು ಕಾಲ ಕೃಷಿ ಸಂಶೋಧನಾ ಸಂಸ್ಥೆಗಳ ಏಷಿಯಾ–ಪೆಸಿಫಿಕ್ ಸಂಘ, ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆ, ಬ್ಯಾಂಕಾಕ್‌ನ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಡಾ. ಪರೋಡಾರವರು 2010–2014ರವರೆಗೆ ಹರಿಯಾಣಾದ ರೈತ ಆಯೋಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರು ಎ.ಸಿ.ಐ.ಎ.ಆರ್, ಸಿ.ಎ.ಬಿ.ಐ. ಮತ್ತು ಡಬ್ಲ್ಯೂ.ಎಂ.ಓ. ಸಲಹಾ ಸಮಿತಿಗಳ ಸದಸ್ಯರಾಗಿ, ಅಂತರರಾಷ್ಟ್ರೀಯ ಅರೆ–ಶುಷ್ಕ ಉಷ್ಣ ವಲಯಗಳ ಬೆಳೆ ಸಂಶೋಧನಾ ಸಂಸ್ಥೆಯ ಪ್ರತಿಷ್ಠಾನ ಮಂಡಳಿಯ ಅಧ್ಯಕ್ಷರಾಗಿ ಹಾಗೂ ಸಿ.ಜಿ.ಐ.ಎ.ಆರ್.ನ ಹಣಕಾಸು ಸಮಿತಿ ಮತ್ತು ಎಸ್.ಐ.ಎಂ.ಇ.ಸಿ.ಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಶ್ರೀಯುತರು ಅಲಬಾಮ, ಯು.ಎಸ್.ಎ.ನ ಅಂತರರಾಷ್ಟ್ರೀಯ ರಸಗೊಬ್ಬರ ಅಭಿವೃದ್ಧಿ ಕೇಂದ್ರದ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ ಎರಡು ದಶಕಗಳಲ್ಲಿ, ಡಾ.ಪರೋಡಾರವರು ನವದೆಹಲಿಯ ಪೂಸಾ ಕಾಂಪ್ಲೆಕ್ಸ್‌ನಲ್ಲಿನ ಕೃಷಿ ವಿಜ್ಞಾನಗಳ ಅಭಿವೃದ್ಧಿ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಸನ್ಮಾನ್ಯರೆ, ಇಂದು ನೀವು ನಮ್ಮೊಡನಿರುವುದು ಸಂತೋಷದ ವಿಷಯವಾಗಿದೆ. ನಿಮ್ಮನ್ನು ನಾನು ವಿಶ್ವವಿದ್ಯಾನಿಲಯದ 56ನೇ ಘಟಿಕೋತ್ಸವಕ್ಕೆ ಅತ್ಯಂತ ಹೃತ್ಪೂರ್ವಕ ಆದರದ ಸ್ವಾಗತವನ್ನು ಕೋರುತ್ತೇನೆ.**

requirements of farmers and the farming sector. Further, the Hon'ble Minister is instrumental in enhancing undergraduate seat reservation under agriculturist quota from 40 to 50%. Recently, he visited organizations at European countries *viz.,* BioFace World Organic trade fair, Nuremberg, Germany; FiBL, Research Institute for Organic Agriculture, Frick, Switzerland; Food & Agricultural Organization (FAO), Rome, Italy; Internaitonal Fund for Agricultural Development (IFAD), Rome, Italy; World Food Programme (WFP), Rome and Italy to explore the exchange of agricultural technologies.

**Sir, on behalf of the University, I heartily welcome you to the 56$^{th}$ Convocation of the University.**

**Dr. Rajendra Singh Paroda,** former Director General, Indian Council of Agricultural Research (ICAR) & Secretary, Department of Agricultural Research and Education (DARE), Government of India, holds a unique perspective as an accomplished scientist, able research administrator and development practitioner. He is well known for modernization and strengthening the Indian National Agricultural Research System (NARS). Government of India has recognized his valuable contributions by bestowing on him the prestigious national Padma Bhusan Award. He is the recipient of several awards and recognitions - Rafi Ahmad Kidwai Prize, ICAR Team Research Award, FICCI Award, Om Prakash Bhasin Award, BP Pal Gold Medal, Borlaug Award, Mahendra Shiromani Award, AB Joshi Award, US Awasthi-IFFCO Award and M.S. Swaminathan Award. He has also served as President, Indian Science Congress (2001) and President, National Academy of Agricultural Sciences (1997-2000). Nineteen Universities have awarded him D.Sc. (*Honoris Causa*) degree including Ohio State University and Indian Agricultural Research Institute. He is Fellow of all Science Academies in India, Third World Academy of Sciences, Russian Academy of Agricultural Sciences, Agriculture Academics of Armenia, Georgia and Tajikistan and Honorary Member of American Society of Crop Science and American Society of Agronomy.

Dr. Paroda had been the founder Chairman of Global Forum on Agricultural Research (GFAR), from 2007-12 based at FAO, Rome. He has served for more than two decades as Executive Secretary of Asia-Pacific Association of Agricultural Research Institutions (APAARI), FAO, Bangkok. Dr. Paroda has served as Chairman, Farmers Commission of Haryana from 2010-2014 and as member on ACIAR, CABI and WMO Advisory Committees. He was Chairman of Board of Trustees of ICRISAT, Member of Finance Committee and SIMEC of CGIAR. Currently, he is on the Board of International Fertilizer Development Center (IFDC), Alabama USA. For the last two decades, Dr. Paroda is serving as Founder Chairman, Trust for Advancement of Agricultural Sciences (TAAS), Pusa Campus, New Delhi.

**Sir, it is our pleasure to have you amidst us. I heartily extend our most cordial welcome to you for the 56$^{th}$ Convocation of the University.**

ವಿಶ್ವವಿದ್ಯಾನಿಲಯದ ಆಡಳಿತ ನಿರ್ವಹಣಾ ಮಂಡಳಿಯ ಸದಸ್ಯರಿಗೆ, ಶೈಕ್ಷಣಿಕ ಮಂಡಳಿಯ ಸದಸ್ಯರಿಗೆ, ಕರ್ನಾಟಕದ ಕೃಷಿ ವಿಶ್ವವಿದ್ಯಾನಿಲಯಗಳ ಹಾಲಿ ಹಾಗೂ ವಿಶ್ರಾಂತ ಕುಲಪತಿಗಳಿಗೆ, ವಿಶ್ರಾಂತ ಅಧಿಕಾರಿಗಳಿಗೆ ಹಾಗೂ ಆಡಳಿತ ನಿರ್ವಹಣಾ ಮಂಡಳಿ ಸದಸ್ಯರಿಗೆ, ಪ್ರತಿಷ್ಠಿತ ಆಹ್ವಾನಿತರಿಗೆ, ಗೌರವಾನ್ವಿತ ದಾನಿಗಳಿಗೆ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ, ನಿವೃತ್ತ ಸಿಬ್ಬಂದಿಯವರಿಗೆ ಹಾಗೂ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದವರಿಗೆ ಹಾರ್ದಿಕ ಸ್ವಾಗತವನ್ನು ಕೋರುತ್ತೇನೆ. ಈ ವರ್ಷ ಪದವಿ ಪಡೆಯುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಅವರ ಪೋಷಕರಿಗೆ ಮತ್ತು ಕುಟುಂಬದವರಿಗೆ 56ನೇ ಘಟಿಕೋತ್ಸವಕ್ಕೆ ಆತ್ಮೀಯವಾಗಿ ಸ್ವಾಗತಿಸಲು ನನಗೆ ಅತ್ಯಂತ ಸಂತೋಷವಾಗುತ್ತಿದೆ.

**ಈ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ 2021–22ರ ಸಾಲಿನ ಸಾಧನೆಗಳ ಸಂಕ್ಷಿಪ್ತ ವರದಿಯನ್ನು ನಿಮ್ಮ ಮುಂದಿಡಲು ನನಗೆ ವಿಶೇಷ ಗೌರವವೆನಿಸುತ್ತಿದೆ.**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವನ್ನು 1963ರಲ್ಲಿ ಆಗಿನ ಮೈಸೂರು ಸರಕಾರವು ಶಾಸನದ ಕಾಯ್ದೆಯಡಿ ಸ್ಥಾಪಿಸಿದ್ದು, ವಿಶ್ವವಿದ್ಯಾನಿಲಯವು ತನ್ನ ಆಸ್ತಿತ್ವದ 59 ವರ್ಷಗಳನ್ನು ಪೂರ್ಣಗೊಳಿಸಿದೆಯೆಂದು ನೆರೆದಿರುವ ಗಣ್ಯರಿಗೆ ತಿಳಿಸಲು ನನಗೆ ಸಂತೋಷವಾಗುತ್ತಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ದೇಶದ ಮುಂಚೂಣಿಯಲ್ಲಿರುವ ಕೃಷಿ ವಿಶ್ವವಿದ್ಯಾನಿಲಯಗಳಲ್ಲೊಂದಾಗಿದೆ.

## ಬೋಧನೆ

**ಈಗ ನಾನು ಬೋಧನಾ ಚಟುವಟಿಕೆಗಳ ಒಂದು ಸಂಕ್ಷಿಪ್ತ ವರದಿಯನ್ನು ಮಂಡಿಸುತ್ತೇನೆ.**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಸೇರಿದ ಒಟ್ಟು 5 ಬೋಧನಾ ಆವರಣಗಳಲ್ಲಿ (ಬೆಂಗಳೂರು, ಮಂಡ್ಯ, ಹಾಸನ, ಚಿಂತಾಮಣಿ ಮತ್ತು ಚಾಮರಾಜನಗರ) 6 ಸ್ನಾತಕ ಪದವಿ ಕಾರ್ಯಕ್ರಮಗಳನ್ನು, 26 ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ 17 ವಿಷಯಗಳಲ್ಲಿ ಡಾಕ್ಟರಲ್ ಪದವಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಮಂಡ್ಯ ಕೃಷಿ ಕಾಲೇಜಿನಲ್ಲಿ, 5 ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಹಾಗೂ ಹಾಸನದ ಕೃಷಿ ಕಾಲೇಜಿನಲ್ಲಿ ಮತ್ತು ಚಿಂತಾಮಣಿಯ ರೇಷ್ಮೆ ಕೃಷಿ ಕಾಲೇಜಿನಲ್ಲಿ 3 ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ. ಇದಲ್ಲದೇ, ವಿಶ್ವವಿದ್ಯಾನಿಲಯವು ಡಿಪ್ಲೊಮಾ ಕೃಷಿ (2 ವರ್ಷ), ಡಿಪ್ಲೊಮಾ ರೇಷ್ಮೆಕೃಷಿ (2 ವರ್ಷ), ಡಿಪ್ಲೊಮಾ ಬೇಕರಿ ತಂತ್ರಜ್ಞಾನ (1 ವರ್ಷ) ಹಾಗೂ ವಿವಿಧ ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ದೂರಶಿಕ್ಷಣದಡಿಯಲ್ಲಿ ಕೃಷಿ ವಿಸ್ತರಣಾ ನಿರ್ವಹಣೆ (PGDAEM), ಕೃಷಿಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ (PGDA), ಸಮಗ್ರ ಕೃಷಿ ಪದ್ಧತಿ (IFS), ಹಣ್ಣು ಮತ್ತು ತರಕಾರಿಗಳ ಕೊಯ್ಲಿನೋತ್ತರ ಸಂಸ್ಕರಣೆ (PHMFV), ಸಾವಯವ ಕೃಷಿ (OF) ಮತ್ತು ಜೇನು ಕೃಷಿ ವಿಷಯಗಳಲ್ಲಿ ನಡೆಸಲಾಗುತ್ತದೆ. ಪ್ರತಿ ವರ್ಷವೂ ಕೃ.ವಿ.ವಿ.ಯು ಮತ್ತು ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ CET ಪರೀಕ್ಷೆಯ ಮುಖಾಂತರ ಸ್ನಾತಕ ಪದವಿಗಳಿಗೆ ಪ್ರವೇಶ ಪ್ರಕ್ರಿಯೆಯನ್ನು ಕೈಗೊಳ್ಳುತ್ತವೆ.

**2021–22ರ ಸಾಲಿನ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಸಾಧನೆಗಳ ಪಕ್ಷಿನೋಟ**

**ಪ್ರವೇಶಾತಿ**

- 2021–22ನೇ ಸಾಲಿನಲ್ಲಿ ಒಟ್ಟು 918 ವಿದ್ಯಾರ್ಥಿಗಳು ಸ್ನಾತಕ ಪದವಿಗೆ ಪ್ರವೇಶಾತಿ ಪಡೆದಿರುತ್ತಾರೆ, ಅದರಲ್ಲಿ 66 ವಿದ್ಯಾರ್ಥಿಗಳು ಐ.ಸಿ.ಎ.ಆರ್, 58 ವಿದ್ಯಾರ್ಥಿಗಳು ಅನಿವಾಸಿ ಭಾರತೀಯರು ಮತ್ತು ಒಬ್ಬ ವಿದ್ಯಾರ್ಥಿ ವಿದೇಶಿಗರು

I extend a warm welcome to the Members of the Board of Management of the University, the Members of the Academic Council and former Vice-Chancellors of Farm Universities of Karnataka, Former Officers and Members of Board of Management, Distinguished Invitees, Esteemed Donors, present & former Employees and representatives of print & electronic media. I extend an affectionate welcome to the graduating students receiving degrees during this 56$^{th}$ Convocation and to their parents and families.

**I consider it as a privilege to present a brief report of the accomplishments of the University during 2021-22.**

At the outset, I am happy to share with this august gathering that the University of Agricultural Sciences, Bangalore was established in 1963 through an Act of Legislature by the erstwhile Government of Mysore and has now completed 59 years. UAS, Bangalore is one of the leading Agricultural Universities in the country.

## TEACHING

**I now present a brief report on the teaching activities**

University of Agricultural Sciences, Bangalore has five teaching campuses at Bengaluru, Chintamani, Hassan, Mandya and Chamarajanagara. UAS, Bangalore offers six Bachelors Degree Programmes in agriculture and allied subjects, Master's Degree in 26 disciplines, Doctoral Degree in 17 disciplines and Post Doctoral programmes in some selected disciplines at GKVK Campus, Master's degree is also offered in five disciplines at College of Agriculture, Mandya, in three disciplines at College of Agriculture, Hassan and in three disciplines at College of Sericulture, Chintamani. The University also offers Diploma courses namely Diploma in Agriculture (2 years), Diploma in Sericulture (2 years), Diploma in Bakery Technology (One Year) and Certificate courses of different durations on regular basis. Diploma and certificate courses on distance education mode are being offered in Agricultural Extension Management (PGDAEM), Post Graduate Diploma in Agriculture (PGDA), courses in Integrated Farming System (IFS), Post-Harvest Management of Fruits and Vegetables (PHMFV) course, Organic Farming (OF) and Apiculture courses, besides, Diploma in Agriculture (DIA). UAS-B and all other Farm Universities in the state have opted to admit the students through Common Entrance Test (CET) conducted by the Karnataka Examination Authority for various Undergraduate Programmes.

### Highlights of Achievements of UAS-B during 2021-22

### Admissions

- During the Academic year 2021-22, 918 candidates were admitted to Bachelor's Degree Programme, of which 66 were ICAR students and 58 were NRI students and one was a foreign national

- ಸ್ನಾತಕೋತ್ತರ ಪದವಿಗೆ ಒಟ್ಟು 337 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ, ಅದರಲ್ಲಿ 72 ವಿದ್ಯಾರ್ಥಿಗಳು ಐ.ಸಿ.ಎ.ಆರ್./ ಜೆ.ಎನ್.ಯು. ಅಭ್ಯರ್ಥಿಗಳು, 15 ವಿದ್ಯಾರ್ಥಿಗಳು ಅನಿವಾಸಿ ಭಾರತೀಯರು ಮತ್ತು ಒಬ್ಬ ವಿದೇಶಿ ವಿದ್ಯಾರ್ಥಿ
- ಡಾಕ್ಟೊರಲ್ ಪದವಿಗೆ ಒಟ್ಟು 117 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ, ಅದರಲ್ಲಿ 19 ವಿದ್ಯಾರ್ಥಿಗಳು ಐ.ಸಿ.ಎ.ಆರ್ ಅಭ್ಯರ್ಥಿಗಳು, ಒಬ್ಬ ವಿದ್ಯಾರ್ಥಿ ಅನಿವಾಸಿ ಭಾರತೀಯ ಮತ್ತು 3 ವಿದೇಶಿ ವಿದ್ಯಾರ್ಥಿಗಳು
- ಇದಲ್ಲದೆ, 2021–22ರ ಶೈಕ್ಷಣಿಕ ಸಾಲಿನಲ್ಲಿ ಒಟ್ಟು 49 ವಿದ್ಯಾರ್ಥಿಗಳು ಮಂಡ್ಯ ಆವರಣದಲ್ಲಿ ಎರಡು ವರ್ಷಗಳ ಡಿಪ್ಲೋಮಾ (ಕೃಷಿ) ಮತ್ತು 7 ವಿದ್ಯಾರ್ಥಿಗಳು ಚಿಂತಾಮಣಿ ಆವರಣದಲ್ಲಿ ಎರಡು ವರ್ಷಗಳ ಡಿಪ್ಲೊಮಾ (ರೇಷ್ಮೆ ಕೃಷಿ) ಕಾರ್ಯಕ್ರಮದಡಿಯಲ್ಲಿ ಸೇರ್ಪಡೆಯಾಗಿದ್ದಾರೆ
- 2021–22ನೇ ಸಾಲಿನಿಂದ ಕೃಷಿ ಕಾಲೇಜು, ಮಂಡ್ಯದಲ್ಲಿ ಡಾಕ್ಟೊರಲ್ ಪದವಿಯನ್ನು ಮೂರು (ಮಣ್ಣು ವಿಜ್ಞಾನ, ಬೇಸಾಯಶಾಸ್ತ್ರ ಮತ್ತು ಸಸ್ಯರೋಗಶಾಸ್ತ್ರ) ವಿಷಯಗಳಲ್ಲಿ ಹೊಸದಾಗಿ ಪ್ರಾರಂಭಿಸಲಾಗಿದೆ

**ವಿದ್ಯಾರ್ಥಿವೇತನಗಳು**

- ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಸ್ನಾತಕ ಪದವಿ ಕಾರ್ಯಕ್ರಮಗಳಡಿಯಲ್ಲಿ ಒಟ್ಟು 80 ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿ ವೇತನ, 444 ವಿದ್ಯಾರ್ಥಿಗಳಿಗೆ ಸಾಮಾನ್ಯ ಅರ್ಹತಾ ವಿದ್ಯಾರ್ಥಿವೇತನವನ್ನು ಹಾಗೂ 9 ವಿದ್ಯಾರ್ಥಿಗಳಿಗೆ ದಾನಿಗಳು ಕೊಡುವ ವಿದ್ಯಾರ್ಥಿವೇತನವನ್ನು ನೀಡಿದೆ.
- ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಡಿಯಲ್ಲಿ ಒಟ್ಟು 156 ವಿದ್ಯಾರ್ಥಿಗಳಿಗೆ ಕೃಷಿ ವಿಶ್ವವಿದ್ಯಾಲಯದ ಸ್ಥಾನಿಕ ಅರ್ಹತಾ ವಿದ್ಯಾರ್ಥಿವೇತನವನ್ನು ಹಾಗೂ 6 ವಿದ್ಯಾರ್ಥಿಗಳಿಗೆ ದಾನಿಗಳು ಕೊಡುವ ಶಿಷ್ಯವೇತನವನ್ನು ನೀಡಿದೆ
- ಜಿ.ಕೆ.ವಿ.ಕೆ. ಆವರಣದಲ್ಲಿ ಒಟ್ಟು 66 ಪಿಎಚ್.ಡಿ. ಪದವಿ ವಿದ್ಯಾರ್ಥಿಗಳಿಗೆ ಕೃಷಿ ವಿಶ್ವವಿದ್ಯಾಲಯದ ಸ್ಥಾನಿಕ ಅರ್ಹತಾ ವಿದ್ಯಾರ್ಥಿವೇತನವನ್ನು ನೀಡಲಾಗಿದೆ
- ಒಟ್ಟು 26 ಪಿಎಚ್.ಡಿ. ಪದವಿ ವಿದ್ಯಾರ್ಥಿಗಳಿಗೆ ಕೃಷಿ ವಿಶ್ವವಿದ್ಯಾನಿಲಯದ ಸ್ಥಾನಿಕ ಅರ್ಹತಾ ವಿದ್ಯಾರ್ಥಿ ವೇತನವನ್ನು ನೀಡಲಾಗಿದೆ

**ಪ್ರಮುಖ ಶೈಕ್ಷಣಿಕ ಸುಧಾರಣೆಗಳು / ಸಾಧನೆಗಳು**

1) ಕೃ.ವಿ.ವಿ. ಬೆಂಗಳೂರಿನಲ್ಲಿ 'ಆಂತರಿಕ ಗುಣಮಟ್ಟ ಖಾತರಿ ಕೋಶ' ಸ್ಥಾಪಿಸಲು 194ನೇ ಶೈಕ್ಷಣಿಕ ಮಂಡಳಿ ಅನುಮೋದನೆ ನೀಡಿದೆ
2) ಸ್ನಾತಕ ಪದವಿ ಉತ್ತರ ಪತ್ರಿಕೆಗಳ 24x7 ಅವಧಿಯಲ್ಲಿ ಎಲ್ಲಿಂದಲಾದರೂ ಮತ್ತು ಯಾವಾಗಲಾದರೂ ಡಿಜಿಟಲ್ ಮೌಲ್ಯಮಾಪನವನ್ನು ಮಾಡುವ ಸೌಲಭ್ಯದ ಮುಖಾಂತರ ಬೋಧಕರು ಕೃ.ವಿ.ವಿ.ಗೆ ಸಮಯ ಮತ್ತು ಸಂಪನ್ಮೂಲಗಳನ್ನು ಉಳಿಸುವಲ್ಲಿ ಉಪಕಾರಿಯಾಗಿದೆ
3) ಕೃ.ವಿ.ವಿ., ಬೆಂಗಳೂರು ರಾಷ್ಟ್ರಮಟ್ಟದ ಅಕ್ರೆಡಿಟೇಶನ್‌ನಲ್ಲಿ ಒಟ್ಟಾರೆ 3.261 ಸ್ಕೋರ್ ಪಡೆದುಕೊಂಡಿದ್ದು, ಇದು ಗ್ರೇಡ್ 'ಎ' ಗೆ ಸಮಾನ ಹಾಗೂ 5 ವರ್ಷಗಳ ಅವಧಿಗೆ ಸಿಂಧುತ್ವ ಪಡೆದಿರುತ್ತದೆ
4) 2021–22ನೇ ಸಾಲಿಗೆ ಅಖಿಲ ಭಾರತ ಕೃಷಿ ವಿಶ್ವವಿದ್ಯಾನಿಲಯಗಳ ಒಕ್ಕೂಟದ ರ್‍ಯಾಂಕ್ ಪಟ್ಟಿಯಲ್ಲಿ ಕೃ.ವಿ.ವಿ. ಬೆಂಗಳೂರಿಗೆ ಮೂರನೇ ಸ್ಥಾನ ದೊರಕಿದೆ.
5) 2022–23ನೇ ಸಾಲಿನಿಂದ ರೇಷ್ಮೆ ಕೃಷಿ ಕಾಲೇಜ್, ಚಿಂತಾಮಣಿಯಲ್ಲಿ, ಸ್ನಾತಕೋತ್ತರ ಪದವಿಗಳನ್ನು ಮೂರು (ಬೇಸಾಯಶಾಸ್ತ್ರ, ಕೀಟಶಾಸ್ತ್ರ ಮತ್ತು ರೇಷ್ಮೆ ಕೃಷಿ) ವಿಷಯಗಳಲ್ಲಿ ಹೊಸದಾಗಿ ಪ್ರಾರಂಭಿಸಲಾಗಿದೆ

- About 337 candidates were admitted to Master's Degree Programmes, of which 72 were ICAR / JNU, 15 NRI Students and one foreign student
- For the Doctoral Degree programmes, 117 candidates were admitted including 19 students from ICAR, one NRI and three foreign nationals
- As many as 49 candidates were admitted for the two year Diploma course offered at College of Agriculture, Mandya and seven candidates were admitted for the two year Diploma course offered at College of Sericulture, Chintamani
- Three new Ph.D. courses have been started at College of Agriculture, Mandya in three subjects (Soil Science, Agronomy and Plant Pathology) from 2021-22 onwards

**University Scholarships**

- University has awarded 80 UAS Merit Scholarships, 444 General Merit Scholarships and nine Donors Scholarships to students pursuing various UG degree programmes offered at different campuses
- University has awarded University Resident Merit Scholarships to 156 students and Donor Scholarship to six students pursuing various Masters Degrees Programmes
- For Ph.D. degree programmes at GKVK, Bengaluru, 66 students have been awarded with University Resident Merit Scholarships
- About 26 University Resident Merit Scholarships (URMS) have been awarded to students pursuing Ph.D. Degree Programmes

**Major Academic Reforms / Achievements**

1) 194$^{th}$ Academic Council of UAS-B approved the item for establishment of Internal Quality Assurance Cell (IQAC) at UAS, Bangalore
2) Decentralized digital evaluation of answer booklets of UG students at anytime from anywhere (24x7) is implemented which saves time and resouces
3) UAS, Bangalore has obtained Overall Accreditation score of 3.261 which is equivalent to Grade 'A' for all constituent colleges, UG, PG and Doctoral degree programmes, which is valid for a period of five years
4) UAS-B has secured 3$^{rd}$ position at the National level as per All India Agricultural Universities (AIAUS) ranking for the year 2021-22
5) Commencement of M.Sc. (Agri.) in Sericulture; Agronomy and Entomology at College of Sericulture, Chintamani from the academic year 2022-23

6) 2022–23ನೇ ಸಾಲಿನಿಂದ ಕೃಷಿ ಕಾಲೇಜ್, ಹಾಸನದಲ್ಲಿ, ಸ್ನಾತಕೋತ್ತರ ಪದವಿಗಳನ್ನು ಮೂರು (ಆಣ್ವಿಕ ಜೀವಶಾಸ್ತ್ರ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೇಸಾಯಶಾಸ್ತ್ರ; ಆಹಾರ ಸಂಸ್ಕರಣಾ ಮತ್ತು ತಂತ್ರಜ್ಞಾನ) ವಿಷಯಗಳಲ್ಲಿ ಹೊಸದಾಗಿ ಪ್ರಾರಂಭಿಸಲಾಗಿದೆ

7) 2022–23ನೇ ಶೈಕ್ಷಣಿಕ ಸಾಲಿನಿಂದ ಕೃಷಿ ಇಂಜಿನಿಯರಿಂಗ್ ಕಾಲೇಜ್, ಜಿ.ಕೆ.ವಿ.ಕೆ.ಯಲ್ಲಿ, ಎಂ.ಟೆಕ್. (ಕೃಷಿ ಯಂತ್ರೋಪಕರಣ ಮತ್ತು ಪವರ್ ಇಂಜಿನಿಯರಿಂಗ್) ಸ್ನಾತಕೋತ್ತರ ಪದವಿಯನ್ನು ಹೊಸದಾಗಿ ಪ್ರಾರಂಭಿಸಲಾಗಿದೆ

8) 2022–23ನೇ ಸಾಲಿನಿಂದ ಕೃಷಿ ಕಾಲೇಜ್, ಬೆಂಗಳೂರಿನಲ್ಲಿ, ಜೀವ ರಸಾಯನ ಶಾಸ್ತ್ರದಲ್ಲಿ ಡಾಕ್ಟೊರಲ್ ಪದವಿ ಕಾರ್ಯಕ್ರಮವನ್ನು ಹೊಸದಾಗಿ ಪ್ರಾರಂಭಿಸಲಾಗಿದೆ

9) ಜಿ.ಕೆ.ವಿ.ಕೆ. ಆವರಣದಲ್ಲಿರುವ ಕೃಷಿ ಇಂಜಿನಿಯರಿಂಗ್ ವಿಭಾಗವನ್ನು, ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾಲಯವನ್ನಾಗಿ ಉನ್ನತೀಕರಿಸಲಾಗಿದೆ

10) ಜಿ.ಕೆ.ವಿ.ಕೆ. ಆವರಣದಲ್ಲಿರುವ ಕೃಷಿ ಮಾರುಕಟ್ಟೆ, ಸಹಕಾರ ಮತ್ತು ವ್ಯಾಪಾರ ನಿರ್ವಹಣಾ ವಿಭಾಗವನ್ನು, ಕೃಷಿ ವ್ಯಾಪಾರ ನಿರ್ವಹಣಾ ಸಂಸ್ಥೆಯನ್ನಾಗಿ ಉನ್ನತೀಕರಿಸಲಾಗಿದೆ

11) ಕೃಷಿ ಕಾಲೇಜು, ಚಾಮರಾಜನಗರದಲ್ಲಿ ಮೂಲಭೂತ ಸೌಕರ್ಯಗಳನ್ನು ಹಾಗೂ ಮಾನವ ಸಂಪನ್ಮೂಲಗಳನ್ನು ನೀಡಿ, ಈ ಆವರಣವನ್ನು ಉನ್ನತೀಕರಿಸಲಾಗಿದೆ

12) ಕೃ.ವಿ.ವಿ.ಯಲ್ಲಿನ ಎಲ್ಲಾ ಸ್ನಾತಕ ಪದವಿ ಕಾರ್ಯಕ್ರಮಗಳಿಗೆ 'ರಾಷ್ಟ್ರೀಯ ಶಿಕ್ಷಣ ನೀತಿ–2020'ರ ಅನುಷ್ಠಾನದ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ

13) ಜಿ.ಕೆ.ವಿ.ಕೆ. ಕ್ಯಾಂಪಸ್‌ನಲ್ಲಿರುವ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ವಿಡಿಯೋ–ಸಮಾವೇಶ ಸೇರಿದಂತೆ ಮೂಲಭೂತ ಸೌಕರ್ಯಗಳ ಉನ್ನತೀಕರಣ ಮಾಡಲಾಗಿದೆ

14) ವಿಶ್ವವಿದ್ಯಾನಿಲಯದ ಮಂಡ್ಯ, ಹಾಸನ ಹಾಗೂ ಚಿಂತಾಮಣಿ ಆವರಣಗಳ ಗ್ರಂಥಾಲಯದಲ್ಲಿನ ಪುಸ್ತಕಗಳಿಗೆ RFI ಟ್ಯಾಗಿಂಗ್ ಮಾಡಲಾಗಿದೆ

15) ಸ್ನಾತಕ ವಿದ್ಯಾರ್ಥಿಗಳಿಗೆ 2021–22ನೇ ಶೈಕ್ಷಣಿಕ ವರ್ಷದಿಂದ ವಿದ್ಯಾರ್ಥಿ ಸಿದ್ಧತೆ (Student READY) ಕಾರ್ಯಕ್ರಮದಡಿ Cross-Learning ಕಾರ್ಯಕ್ರಮವನ್ನು ಮತ್ತು Finishing School ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ

16) ಸ್ನಾತಕ ವಿದ್ಯಾರ್ಥಿಗಳಿಗೆ 2022–23ನೇ ಶೈಕ್ಷಣಿಕ ಸಾಲಿನಿಂದ ಅತ್ಯುತ್ತಮ ವಿದ್ಯಾರ್ಥಿ ಪ್ರಶಸ್ತಿ ಅನುಷ್ಠಾನಗೊಳಿಸಲಾಗಿದೆ ಹಾಗೂ ಇದನ್ನು ಅಕ್ಟೋಬರ್ 2022ರಲ್ಲಿ ಕೃ.ವಿ.ವಿ.ಯ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ನೀಡಲಾಗುತ್ತದೆ

17) 2022–23ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ, ಕೃ.ವಿ.ವಿ. ಸೇವೆಯಿಂದ ವಯೋನಿವೃತ್ತಿ ಹೊಂದಿರುವ ಅತ್ಯುತ್ತಮ ಪ್ರಾಧ್ಯಾಪಕರನ್ನು ಗುರುತಿಸಿ, ಅವರ ಸೇವೆಯನ್ನು ಪುನಃ ಕೃ.ವಿ.ವಿ.ಗೆ ಬಳಸಿಕೊಳ್ಳುವ ಉದ್ದೇಶದಿಂದ ಅತ್ಯೋನ್ನತ ಪ್ರಾಧ್ಯಾಪಕರ (Professor of Eminence) ಪುನರ್ನೇಮಕಾತಿಯನ್ನು ಅನುಷ್ಠಾನಗೊಳಿಸಲಾಗಿದೆ

18) 2022–23ನೇ ಸಾಲಿನಿಂದ ಕೃಷಿ ಕ್ಷೇತ್ರಕ್ಕೆ ಹಾಗೂ ದೇಶದ ಪ್ರಗತಿಗೆ ಅತ್ಯುತ್ತಮ ಕೊಡುಗೆ ಸಲ್ಲಿಸಿರುವ ಪರಿಣಿತರನ್ನು ಕೃ.ವಿ.ವಿ.ಯು ಗುರುತಿಸಿ 'ಗೌರವ ಡಾಕ್ಟರೇಟ್' ಪ್ರದಾನ ಮಾಡಲು ನಿಯಮಾವಳಿಗಳನ್ನು ರೂಪಿಸಿದೆ

6) Commencement of M.Sc. (Agri.) in Molecular Biology & Biotechnology and Agronomy; M. Tech. in Food Processing Technology at College of Agriculture, Hassan from the academic year 2022-23

7) Starting of M. Tech. in Farm Machinery and Power Engineering in the Department of Farm Machinery and Power Engineering, CoAE, GKVK Bengaluru from the academic year 2022-23

8) Commencement of Ph.D. programme in Biochemistry at College of Agriculture, GKVK from the the academic year 2022-23

9) Upgradation of Department of Agricultural Engineering into College of Agricultural Engineering at GKVK Campus

10) Upgradation of Department of Agricultural Marketing & Cooperation and Business Management into 'Institute of Agri-Business Management' at GKVK Campus

11) Upgradation of facilities and manpower in newly established College of Agriculture, Chamarajanagar

12) Initiated the process of implementation of 'National Education Policy-2020' for all the UG Degree Programmes in the University

13) Upgradation of infrastructure facilities at University Library at GKVK Campus including Video-Conferencing facility

14) RFID tagging of books and periodicals has been undertaken at Libraries in Mandya, Hassan and Chintamani Campuses

15) Introduced 'Cross-Learning Programme' and 'Finishing School Programme' among UG students under Student READY Program from the academic year 2021-22

16) Instituted 'Best Outgoing Student Award' and framed guidelines to recognize best overall performing UG student, which will be presented during Foundation Day of the University in October, 2022

17) Instituted "Professor of Eminence' from the academic year 2022-23 to recognize and to continue the services of eminent faculty even after their superannuation for utilizing their expertise

18) Framed the guidelines for awarding 'Honorary Doctorate' to the eminent personalities in the field of agriculture and allied sectors, who have rendered excellent service towards nation building activities

19) ಕೃ.ವಿ.ವಿ. ಬೆಂಗಳೂರಿನಲ್ಲಿ ಮೂಲ ವಿಜ್ಞಾನ ಹಾಗೂ ಮಾನವೀಯತೆ ವಿಷಯಗಳಲ್ಲಿ ಹೊಸದಾಗಿ ವಿಭಾಗವನ್ನು ಪ್ರಾರಂಭಿಸಲಾಗುತ್ತದೆ

20) 2022–23ನೇ ಶೈಕ್ಷಣಿಕ ಸಾಲಿನಿಂದ BSMA ಶಿಫಾರಸ್ಸಿನ ಪ್ರಕಾರ ಸ್ನಾತಕೋತ್ತರ ಪಠ್ಯಕ್ರಮ ಹಾಗೂ ಶೈಕ್ಷಣಿಕ ಮಾಹಿತಿ ಮತ್ತು ನಿಯಮಾವಳಿಗಳನ್ನು ರೂಪಿಸಲಾಗಿದೆ

21) 2022–23ನೇ ಸಾಲಿನಿಂದ BSMA ಶಿಫಾರಸ್ಸಿನ ಪ್ರಕಾರ ಸ್ನಾತಕೋತ್ತರ ಹಾಗೂ ಡಾಕ್ಟೋರಲ್ ಪದವಿ ಕಾರ್ಯಕ್ರಮಗಳ ಪಠ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತದೆ

22) ಜಿ.ಕೆ.ವಿ.ಕೆ.ಯಲ್ಲಿನ ಜೈವಿಕ ಇಂಧನ ಪ್ರಯೋಗಶಾಲೆಗೆ NABL ಮಾನ್ಯತೆ ದೊರಕಿದೆ.

23) ಅತ್ಯುತ್ತಮ ವಿಜ್ಞಾನಿಗಳನ್ನು ಗುರುತಿಸಿ, ಅವರ ಸೇವೆಯನ್ನು ಮತ್ತೆ ಕೃ.ವಿ.ವಿ.ಗೆ ಬಳಸಿಕೊಳ್ಳುವ ಉದ್ದೇಶದಿಂದ Ramanujan Research Fellowಗಳ ಖಾಯಂ ನೇಮಕಾತಿಯನ್ನು ಅನುಷ್ಠಾನಗೊಳಿಸುವ ಕ್ರಮಗಳನ್ನು 194ನೇ ಶೈಕ್ಷಣಿಕ ಮಂಡಳಿ ಸಭೆಯು ಅನುಮೋದನೆ ನೀಡಿದೆ

24) 2022–23ನೇ ಸಾಲಿನಿಂದ ಕೃಷಿ ಕಾಲೇಜು, ಹಾಸನದಲ್ಲಿ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ ಹಾಗೂ ಕೃಷಿ ಜೈವಿಕ ತಂತ್ರಜ್ಞಾನಗಳ ಪ್ರತ್ಯೇಕ ವಿಭಾಗಗಳನ್ನು ಹೊಸದಾಗಿ ಪ್ರಾರಂಭಿಸಲಾಗಿದೆ

25) 2022–23ನೇ ಸಾಲಿನಿಂದ ಪ್ರಸ್ತುತ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಹಾಗೂ ಇತರ ಸಹಯೋಗ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು 66 ಶಿಕ್ಷಕರು/ವಿಜ್ಞಾನಿಗಳನ್ನು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿ ಶಿಕ್ಷಕರೆಂದು ಗುರುತಿಸಲಾಗಿದೆ.

**ವಿದ್ಯಾರ್ಥಿ ಶೈಕ್ಷಣಿಕ ಸಾಧನೆಗಳು**

- ಭಾರತದ ಕೃಷಿ ವಿಶ್ವವಿದ್ಯಾನಿಲಯಗಳ ಪೈಕಿ ಕೃ.ವಿ.ವಿ., ಬೆಂಗಳೂರು 2021–22ನೇ ಸಾಲಿನಲ್ಲಿ 27 ಹಿರಿಯ ಸಂಶೋಧನಾ ಫೆಲೋ ಸ್ಥಾನಗಳನ್ನು ಗಳಿಸಿ ಮೂರನೇ ಸ್ಥಾನವನ್ನು ಪಡೆದುಕೊಂಡಿದೆ
- 2021–22 ನೇ ಸಾಲಿನಲ್ಲಿ 37 ವಿದ್ಯಾರ್ಥಿಗಳು ICAR-NET ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಭಾರತದ 70 ಕೃಷಿ ವಿಶ್ವವಿದ್ಯಾನಿಲಯಗಳ ಪೈಕಿ ಕೃ.ವಿ.ವಿ., ಬೆಂಗಳೂರು ಆರನೇ ಸ್ಥಾನವನ್ನು ಪಡೆದುಕೊಂಡಿದೆ
- 2021–22ನೇ ಶೈಕ್ಷಣಿಕ ಸಾಲಿನಲ್ಲಿ ಕೃ.ವಿ.ವಿ., ಬೆಂಗಳೂರಿನ ಒಟ್ಟು 56 ವಿದ್ಯಾರ್ಥಿಗಳು ಐಸಿಎಆರ್– ಜೆಆರ್‌ಎಫ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ ಮತ್ತು ದೇಶದ ಮತ್ತು ರಾಜ್ಯದ ವಿವಿಧ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕ ಪದವಿಗೆ ಪ್ರವೇಶಾತಿಯನ್ನು ಪಡೆದುಕೊಂಡಿರುತ್ತಾರೆ
- ಹಾಸನದ ಕೃಷಿ ಮಹಾವಿದ್ಯಾಲಯದಿಂದ 2021–22ರ ಶೈಕ್ಷಣಿಕ ವರ್ಷದಲ್ಲಿ 10 ವಿದ್ಯಾರ್ಥಿಗಳು ಜಿ.ಎ.ಟಿ.ಬಿ. ಪ್ರವೇಶ ಪರೀಕ್ಷೆಗಳಲ್ಲಿ ಹಾಗೂ 08 ವಿದ್ಯಾರ್ಥಿಗಳು ಸಿ.ಎಫ್.ಟಿ.ಆರ್.ಐ. ಪ್ರವೇಶ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಾರೆ

**ಕ್ರೀಡಾ/ಎನ್.ಎಸ್.ಎಸ್./ ಸಾಂಸ್ಕೃತಿಕ ಚಟುವಟಿಕೆಗಳು**

- ಕೃಷಿ ಮಹಾವಿದ್ಯಾಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರವು ದಿನಾಂಕ 12.10.2021ರಂದು ಕರ್ನಾಟಕ ಸರ್ಕಾರದ ಕ್ರೀಡಾ ಮತ್ತು ಯುವ ಸಬಲೀಕರಣ ಸಚಿವಾಲಯದ ರಾಜ್ಯದ–ರಾಷ್ಟ್ರೀಯ ಸೇವಾ ಯೋಜನೆ ಕೋಶದಿಂದ 2017–18ನೇ ಸಾಲಿನ ಅತ್ಯುತ್ತಮ 'ರಾಷ್ಟ್ರೀಯ ಸೇವಾ ಯೋಜನೆ ಘಟಕ' ಪ್ರಶಸ್ತಿಯನ್ನು ಪಡೆದುಕೊಂಡಿದೆ

19) Creation of Department of Basic Sciences and Humanities at UAS-B

20) Adoption of PG Syllabus and Academic Information & Regulations as per BSMA recommendations from the 2022-23

21) Made provision for adoption of Syllabus of Masters and Doctoral degree programmes at UAS-B as per BSMA recommendations from the 2022-23

22) The NABL accreditation was given to Bio-fuel laboratory at GKVK

23) 194th Academic Council of UAS-B approved the item for absorption of Ramanujan Research Fellow(s) to UAS, Bangalore as a permanent faculty

24) Creation of Division of Food Science & Technology and Division of Agricultural Biotechnology and constituent Departments at College of Agriculture, Hassan from the 2022-23

25) During the Academic year 2021-22, 66 teachers/Scientists from UAS, Bangalore and other collaborative institutions have been recognized as Postgraduate Teachers of the University.

**Student Academic Achievements**

- UAS-B has secured 3rd position among all the Farm Universities of the country by obtaining 27 SRFs during 2021-22
- UAS-B has secured 6th position among 70 Agricultural Univesities in the country with 37 students having cleared ICAR-NET Examination during 2021-22
- Totally 56 students of UAS, Bangalore cleared the ICAR-JRF examination and got admitted to various Central and State Agricultural Universities for their masters degree programme in the academic year 2021-22.
- Ten Students of CoA, Hassan have passed GATB Exams and passed CFTRI Exams in the academic year 2021-22

**Sports / NSS / Cultural Activities / Extra Curricular Activities**

- College of Agriculture, GKVK, Bengaluru received the Best National Service Scheme Unit award for the year 2017-18 from State NSS Cell, Ministry of Sports and Youth affairs Government of Karnataka on 12.10.2021

- ಕೃ.ವಿ.ವಿ., ಜಿ.ಕೆ.ವಿ.ಕೆ., ಬೆಂಗಳೂರಿನಲ್ಲಿ 29.09.2021ರಂದು ನಡೆದ ಕೃಷಿ ಇನ್ನೋವೇಟಿವ್ ಎಂಟರ್‌ಪ್ರೆನ್ಯೂರ್‌ಶಿಪ್ ಸ್ಟಾರ್ಟ್–ಅಪ್ ಐಡಿಯಾದಲ್ಲಿ ಹಾಸನದ ಕೃಷಿ ಕಾಲೇಜಿನ ತಂಡವು ಎರಡನೇ ಸ್ಥಾನವನ್ನು ಪಡೆದುಕೊಂಡಿದೆ. ಕಾಲೇಜಿನ ನಾಲ್ಕು ತಂಡಗಳು ಭಾಗವಹಿಸಿದ್ದು, ಅದರಲ್ಲಿ ತೃತೀಯ ಬಿ.ಎಸ್ಸಿ.(ಆನರ್ಸ್) ಕೃಷಿಯ ಒಂದು ತಂಡ (ಪೂರ್ವಿಕಾ ಆರ್. ಗೌಡ, ಅಂಕಿತ್, ವಿ., ಗೋಪಾಲಕೃಷ್ಣ, ಟಿ, ಕುಶಾಲ್ ಸಾಗರ.ಆರ್.) ಜಿ.ಕೆ.ವಿ.ಕೆ., ಬೆಂಗಳೂರಿನಲ್ಲಿ ನಡೆದ ಸ್ನಾತಕೋತ್ತರ ವಿಜ್ಞಾನ ಸಪ್ತಾಹ 2021ರ ಸಂದರ್ಭದಲ್ಲಿ 'ಜಾನುವಾರುಗಳಿಗೆ ಬ್ಲಾಕ್ ಸೋಲ್ಜೀಸ್ ಫ್ಲೈ ಪೌಷ್ಠಿಕ ಆಹಾರ' ಎಂಬ ಆವಿಷ್ಕಾರ ಬಹುಮಾನ ಪಡೆದಿದ್ದಾರೆ

- ಅರಸೀಕೆರೆಯಲ್ಲಿ 07.10.2021ರಂದು ಪ್ರಕೃತಿ ಮತ್ತು ವನ್ಯಜೀವಿಗಳ ಕುರಿತು ಜಾಗೃತಿ ಮೂಡಿಸಲು ಹಾಸನದ ಕೃಷಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ಭಾಗವಹಿಸಿ ಬೀದಿ ನಾಟಕವನ್ನು ಪ್ರದರ್ಶಿಸಿದರು. ಈ ಕಾರ್ಯಕ್ರಮವನ್ನು ಕರ್ನಾಟಕ ಅರಣ್ಯ ಇಲಾಖೆ, ಅರಸೀಕೆರೆ ಉಪವಿಭಾಗದವರ ಸಹಯೋಗದಲ್ಲಿ "ಅಂತರಾಷ್ಟ್ರೀಯ ವನ್ಯಜೀವಿ ಸಪ್ತಾಹ" ಪ್ರಯುಕ್ತ ಆಯೋಜಿಸಲಾಗಿತ್ತು

- ಹಾಸನದ ಕೃಷಿ ಮಹಾವಿದ್ಯಾಲಯದ ಅಂತಿಮ ವರ್ಷದ ಬಿ.ಟೆಕ್. (ಆಹಾರ ತಂತ್ರಜ್ಞಾನ) ವಿದ್ಯಾರ್ಥಿ ಶ್ರೀ. ಸಿಂಚನ್.ಡಿ.ಕೆ., ಇವರು ವಿಶ್ವ ಆಹಾರ ದಿನಾಚರಣೆಯ ಸಂದರ್ಭದಲ್ಲಿ ದಿನಾಂಕ 16.10.2021ರಂದು ನಡೆದ ರಾಷ್ಟ್ರೀಯ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಪಡೆದುಕೊಂಡಿದ್ದಾರೆ. ಈ ಕಾರ್ಯಕ್ರಮವನ್ನು ಭಾರತೀಯ ತಂತ್ರಜ್ಞಾನ ಸಂಸ್ಥೆ ಗೌಹಾಟಿ (IIT), ಗುವಾಹಟಿ ಮತ್ತು AgriVision4U ಇವರು ಜಂಟಿಯಾಗಿ ಆಯೋಜಿಸಿದ್ದರು

- ದಿನಾಂಕ 06.12.2021ರಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಹಾಸನ ಇವರು ಆಯೋಜಿಸಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವದಲ್ಲಿ ಹಾಸನದ ಕೃಷಿ ಕಾಲೇಜಿನ ಸಾಂಸ್ಕೃತಿಕ ತಂಡವು ಭಾಗವಹಿಸಿ ಅನೇಕ ಬಹುಮಾನಗಳನ್ನು ಪಡೆದಿದ್ದು ಅದರಲ್ಲಿ ಮೊದಲನೇ ಬಹುಮಾನವನ್ನು ಡೊಳ್ಳು ಕುಣಿತ, ಜಾನಪದ ನೃತ್ಯ, ಸ್ಕಿಟ್, ಸಮಕಾಲೀನ ನೃತ್ಯ, ಗುಂಪು ಚರ್ಚೆಯಲ್ಲಿ ಪಡೆದಿದೆ ಹಾಗೂ ದ್ವಿತೀಯ ಬಹುಮಾನವನ್ನು ವಿದ್ಯಾರ್ಥಿಗಳು ಸಮೂಹ ಜಾನಪದ ಗೀತೆಯಲ್ಲಿ, ಸ್ಟ್ಯಾಂಡಪ್ ಕಾಮಿಡಿಯಲ್ಲಿ ಹಾಗೂ ತೃತೀಯ ಬಹುಮಾನವನ್ನು ಏಕವ್ಯಕ್ತಿ ಗಾಯನದಲ್ಲಿ ಮತ್ತು ಪದ್ಯರಚನೆಯಲ್ಲಿ ಪಡೆದಿದ್ದಾರೆ

- ಜಿಲ್ಲಾ ಲಯನ್ಸ್ ಕ್ಲಬ್, ಮಂಗಳೂರು ಇವರ ವತಿಯಿಂದ 12.12.2021ರಂದು ಮಂಗಳೂರಿನಲ್ಲಿ "ಕಲಾರಂಗ" ಸಾಂಸ್ಕೃತಿಕ ಹಬ್ಬ ಕಾರ್ಯಕ್ರಮ ಆಯೋಜಿಸಲಾಯಿತು. ಇದರಲ್ಲಿ ಕೃಷಿ ಮಹಾವಿದ್ಯಾಲಯ, ಹಾಸನದ ವಿದ್ಯಾರ್ಥಿಗಳ ತಂಡವು ಡೊಳ್ಳು ಜಾನಪದ ನೃತ್ಯದಲ್ಲಿ ದ್ವಿತೀಯ ಸ್ಥಾನವನ್ನು ಮತ್ತು ಕಿರುನಾಟಕ, ಸಂಗೀತ ಮತ್ತು ನೇರ ಚಿತ್ರಕಲೆ ಸೇರಿದಂತೆ ಅತ್ಯುತ್ತಮ ಪ್ರದರ್ಶನಕ್ಕಾಗಿ ಸಮಗ್ರ ಟ್ರೋಫಿಯನ್ನು ಪಡೆದುಕೊಂಡಿತು

- ಕರ್ನಾಟಕ ಸರ್ಕಾರದ ಯುವಕ್ರೀಡಾ ಮತ್ತು ಸಾಂಸ್ಕೃತಿಕ ಇಲಾಖೆಯು 04.01.2022ರಿಂದ 05.01.2022ರವರೆಗೆ ಶ್ರೀ ಆದಿಚುಂಚನಗಿರಿ ವಿಶ್ವವಿದ್ಯಾನಿಲಯ, ಮಂಡ್ಯದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ ಹಾಸನದ ಕೃ.ಮ.ವಿ.ದ ಸಾಂಸ್ಕೃತಿಕ ತಂಡವು ಭಾಗವಹಿಸಿ ಕಿರುನಾಟಕ, ಗುಂಪು ಚರ್ಚೆ, ಏಕವ್ಯಕ್ತಿ ಸಮಕಾಲೀನ ನೃತ್ಯ, ಸಮೂಹ ಸಮಕಾಲೀನ ನೃತ್ಯ ಇದರಲ್ಲಿ ಪ್ರಥಮ ಸ್ಥಾನವನ್ನು ಹಾಗೂ ಡೊಳ್ಳು ಜಾನಪದ ನೃತ್ಯದಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿದೆ. 2023ರ ಜನವರಿ 12ರಿಂದ 16ರವರೆಗೆ ಪುದುಚೆರಿಯಲ್ಲಿ ನಡೆಯಲಿರುವ ರಾಷ್ಟ್ರ ಮಟ್ಟದ ಯುವಜನೋತ್ಸವಕ್ಕೆ ಮಹಾವಿದ್ಯಾಲಯದ ಹದಿನೇಳು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ

- A team from College of Agriculture, Hassan has bagged the second place in Agri-Innovative Entrepreneurship Start-up Idea held on 29th September 2021 at UAS, GKVK, Bengaluru. Four teams of this college participated, out of which a team from III B.Sc. (Hons) Agri. (Poorvika, R. Gowda; Ankith, V.; Gopalakrishna,T. and Kushalsagar, R.,) with the Idea of "Black Soldies Fly-Nutritive feed for livestock" has won the prize on the occasion of PG Science Week-2021 held at GKVK, Bengaluru.

- A team of student volunteer's participated and performed a street play on "Awareness on Nature and wildlife"at Arasikere on 07.10.2021. The event was organized in collaboration with Karnataka Forest Department, Arasikere sub division to commemorate "International Wildlife Week".

- Mr. Sinchan D.K., IV B.Tech. (Food Tech.) of CoA, Hassan secured First Prize in "National Level Quiz Competition" held on the occasion of World Food Day celebration on 16.10.2021. The programme was jointly organized by IIT, Guwahati and AgriVision4U.

- The student cultural team from College of Agriculture, Hassan participated in District Level Youth Festival organized by Dept. of Youth Empowerment & Sports, Hassan on 06.12.2021 and secured first place in Dollu Folk Dance, Skit, Group Discussion, Solo Contemporary Dance; second place in Group folk song, Standup comedy and third place in Solo Singing, Poem Writing.

- On 12-12-2021 District Lions Club, Mangaluru organized "Kalarang" a cultural festivival and students of College of Agriculture, Hassan secured second place in Dollu Folk Dance and they won the overall trophy for the best performance including Skit, Singing and Live Painting.

- Students of College of Agriculture, Hassan participated in State Level Youth Festival organized by Department of Youth Sports and Culture, Government of Karnataka from 04.01.2022 to 05-01-2022 at Sri Adi Chunchanagiri University, Mandya and secured second place in Dollu Folk Dance, first place in Skit, first place in Panel (Group) Discussion, first place in Solo Contemporary Dance and first place in Group Contemporary Dance. Seventeen students have been selected for National Level Youth Festival to be held at Puducherry, Tamilnadu from 12th to 16th January, 2023.

- ರೇಷ್ಮೆಕೃಷಿ ಮಹಾವಿದ್ಯಾಲಯ, ಚಿಂತಾಮಣಿ ಆವರಣದ ವಿದ್ಯಾರ್ಥಿಗಳಾದ ಕು. ರಕ್ಷಿತ.ಪಿ.ವಿ, ಕು. ನಯನ.ಎಸ್.ಕೆ. ಮತ್ತು ಕು. ನಯನ, ಪಿ., ಅವರು ಸೆಪ್ಟೆಂಬರ್ 29, 2021ರಂದು ಆನ್‌ಲೈನ್ ಮೂಲಕ ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ START-UPSನಲ್ಲಿ ಭಾಗವಹಿಸಿದರು ಮತ್ತು ಸ್ನಾತಕ ವಿಭಾಗದಡಿಯಲ್ಲಿ ಮೂರನೇ ಸ್ಥಾನವನ್ನು ಪಡೆದಿರುತ್ತಾರೆ

- ಚಿಂತಾಮಣಿ ರೇಷ್ಮೆಕೃಷಿ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕ ವತಿಯಿಂದ ಏಳು ದಿನಗಳ ಕಾಲ ವಿಶೇಷ ವಾರ್ಷಿಕ ಶಿಬಿರ ಕಾರ್ಯಕ್ರಮವನ್ನು ಮೂರನೇ ಬಿ.ಎಸ್ಸಿ. (ರೇಷ್ಮೆಕೃಷಿ), ಬಿ.ಎಸ್ಸಿ. (ಕೃಷಿ) ಮತ್ತು ಎರಡನೇ ವರ್ಷದ ಡಿಪ್ಲೋಮಾ (ರೇಷ್ಮೆಕೃಷಿ) ವಿದ್ಯಾರ್ಥಿಗಳಿಗೆ ದಿನಾಂಕ 05.06.2022ರಿಂದ 11.06.2022ರವರೆಗೆ ಸುಗುಟೂರು ಗ್ರಾಮ, ಕೋಲಾರ ಜಿಲ್ಲೆ ಮತ್ತು ತಾಲ್ಲೂಕಿನಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಒಟ್ಟು 137 ವಿದ್ಯಾರ್ಥಿಗಳು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು.

**ಸ್ನಾತಕೋತ್ತರ ವಿಜ್ಞಾನ ಸಪ್ತಾಹ 2021: ಸ್ನಾತಕೋತ್ತರ ವಿದ್ಯಾರ್ಥಿಗಳ ವಿಚಾರ ಸಂಕಿರಣ**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ವಿಜ್ಞಾನ ಸಪ್ತಾಹ 2021: ಸ್ನಾತಕೋತ್ತರ ವಿದ್ಯಾರ್ಥಿಗಳ ವಿಚಾರ ಸಂಕಿರಣವನ್ನು 2021ರ ಸೆಪ್ಟೆಂಬರ್ 27ರಿಂದ 30ರವರೆಗೆ ಆಯೋಜಿಸಿತ್ತು. 104 ಪಿಎಚ್.ಡಿ. ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಬೆಳೆ ಸುಧಾರಣೆ, ಬೆಳೆ ಉತ್ಪಾದನೆ, ಸಸ್ಯ ಸಂರಕ್ಷಣೆ ಮತ್ತು ಸಾಮಾಜಿಕ ವಿಜ್ಞಾನಗಳು ಮತ್ತು ಇತರ ವಿಷಯಗಳೆಂಬ ನಾಲ್ಕು ವಿಷಯಗಳಡಿ ಮೌಖಿಕ ಮಂಡನೆ ಮಾಡಿದರು.

**ಸ್ನಾತಕೋತ್ತರ ವಿಜ್ಞಾನ ಸಪ್ತಾಹ 2022 : ಸ್ನಾತಕೋತ್ತರ ವಿದ್ಯಾರ್ಥಿಗಳ ವಿಚಾರ ಸಂಕಿರಣ**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಜಿ.ಕೆ.ವಿ.ಕೆ. ಆವರಣದಲ್ಲಿ ನಡೆದ 'ಸ್ನಾತಕೋತ್ತರ ವಿಜ್ಞಾನ ಸಪ್ತಾಹ 2022'ರ ಸಂದರ್ಭದಲ್ಲಿ 107 ಡಾಕ್ಟೊರಲ್ ವಿದ್ಯಾರ್ಥಿಗಳು ಮೌಖಿಕವಾಗಿ ಹಾಗೂ 340 ಸ್ನಾತಕೋತ್ತರ ವಿದ್ಯಾರ್ಥಿಗಳು ಪೋಸ್ಟರ್‌ಗಳನ್ನು ಬೆಳೆ ಉತ್ಪಾದನೆ (I & II), ಬೆಳೆ ಸುಧಾರಣೆ, ಸಸ್ಯ ಸಂರಕ್ಷಣೆ ಮತ್ತು ಸಾಮಾಜಿಕ ವಿಜ್ಞಾನಗಳು ಮತ್ತು ಇತರ ವಿಷಯಗಳೆಂಬ ನಾಲ್ಕು ವಿಷಯಗಳಡಿ ಸಂಶೋಧನಾ ಸಾರಾಂಶಗಳನ್ನು ಮಂಡಿಸಿದರು.

## ಸಂಶೋಧನೆ

ರಾಜ್ಯದಲ್ಲಿನ ಕೃಷಿಯು ಪ್ರಮುಖವಾಗಿ ಸಣ್ಣ ಹಿಡುವಳಿದಾರರನ್ನು ಮತ್ತು ಅತಿ ಸಣ್ಣ ರೈತರನ್ನು ಹೊಂದಿದ್ದು ಈ ರೈತರ ಆದಾಯವನ್ನು ದ್ವಿಗುಣಗೊಳಿಸಬೇಕಾದರೆ ಉತ್ಪಾದಕತೆಯನ್ನು ಹೆಚ್ಚಿಸುವುದು ಬಹುಮುಖ್ಯ ಅಂಶವಾಗಿದೆ. ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿನ ಸಂಶೋಧನೆಯು ರೈತರಿಗೆ ಲಾಭದಾಯಕವಾಗುವಂತೆ ಮತ್ತು ಆಹಾರಕ್ಕಾಗಿ ಬೆಳೆಯುತ್ತಿರುವ ಬೇಡಿಕೆಯನ್ನು ಪೂರೈಸಲು ಕೃಷಿಯನ್ನು ಪರಿವರ್ತಿಸಲು ಅತ್ಯಾಧುನಿಕ ಕೃಷಿ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದೆ. ಸಮರ್ಥ ಮತ್ತು ಪರಿಸರ ಸ್ನೇಹಿಯಾಗಿರುವ ಸ್ಥಳೀಯ ಪ್ರಸ್ತುತತೆಯೊಂದಿಗೆ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದರ ಮೇಲೆ ಒತ್ತು ನೀಡಲಾಗಿದೆ. ಹೊಸ ತಳಿಗಳು ಮತ್ತು ಹೊಸ ಉತ್ಪಾದನಾ ತಂತ್ರಜ್ಞಾನಗಳ ಅಳವಡಿಕೆಯು ಇಳುವರಿಯನ್ನು ಹೆಚ್ಚಿಸುವುದಲ್ಲದೆ ಬರ ಸಹಿಷ್ಣುತೆಯನ್ನು ಸುಧಾರಿಸುತ್ತದೆ, ಕೀಟಗಳು ಮತ್ತು ರೋಗಗಳಿಗೆ ಪ್ರತಿರೋಧವನ್ನು ಹೆಚ್ಚಿಸಿ, ಹೊಸ ಮಾರುಕಟ್ಟೆ ಅವಕಾಶಗಳನ್ನು ಸೃಷ್ಟಿಸುವುದರ ಮೂಲಕ ರೈತರ ಬೆಳೆ ವ್ಯವಸ್ಥೆಯನ್ನು ಸಮರ್ಥವಾಗಿ ಬಲಪಡಿಸುತ್ತದೆ.

ಆಹಾರ ಭದ್ರತೆಯನ್ನು ಖಾತರಿಪಡಿಸುವುದರ ಜೊತೆಗೆ ಉತ್ಪಾದಕತೆಯನ್ನು ಹೆಚ್ಚಿಸಿ ಮತ್ತು ಯಾವುದೇ ವ್ಯತಿರಿಕ್ತ ಪರಿಣಾಮಗಳಿಲ್ಲದೆ ಕೃಷಿ ಸಂಪನ್ಮೂಲಗಳ ದಕ್ಷತೆಯನ್ನು ಹೆಚ್ಚಿಸುವ ಹಾಗೂ ರೈತರ ಆದಾಯ ಮತ್ತು ಸಾಮಾಜಿಕ ಸ್ಥಿತಿಯ ಗುಣಮಟ್ಟವನ್ನು ಸುಧಾರಿಸುವಂತಹ ಹಾಗು ಸಣ್ಣ ಹಿಡುವಳಿದಾರರು ಮತ್ತು ಅತಿ ಸಣ್ಣರೈತರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯವು 10 ಜಿಲ್ಲೆಗಳಲ್ಲಿರುವ ತನ್ನ 13 ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ಸ್ಥಳ ನಿರ್ದಿಷ್ಟ, ಕಾರ್ಯತಂತ್ರವನ್ನು ಮತ್ತು ನಿರೀಕ್ಷಿತ ಸಂಶೋಧನಾ ಕಾರ್ಯಕ್ರಮಗಳನ್ನು ರೂಪಿಸಿದೆ.

- The students of College of Sericulture, Chintamani Ms. Rakshita, P.V., Ms. Nayana, S.K. and Ms. Nayana, P. participated in START-UPS in Agriculture and allied sectors through online on 29th September, 2021 and secured third prize under UG section for the concept of "Design and Developing a Low-Cost Solar Based Sensor Automatic Irrigation System in Remote Areas of Karnataka" during UAS-B Science Week organized by the Directorate of Post Graduate Studies from 27-30 September, 2021 at GKVK, Bengaluru.
- National Service Scheme (NSS) Unit, College of Sericulture, Chintamani has organized Annual Special Camp for 7 days at Sugutur Village, Kolar Taluk and District for III B.Sc. (Hons.) Agri., B.Sc. (Hons) Seri and II year Diploma (Seri.) students.

**PG Science Week 2021: PG Students' Symposium**

University organized virtual "PG Science Week 2021: PG Students' Symposium" from 27th to 30th September, 2021. There were online Oral presentations by 104 out going Ph.D students under four thematic groups *viz.,* Crop Improvement, Crop Production, Plant Protection and Social Sciences & others

**PG Science week 2022 : PG Students Symposium**

The PG Science Week 2022: PG Students Symposium was held from 17th to 20th August, 2022, wherein107 Doctoral students made oral presentations and 340 Masters students made poster presentations under four thematic groups *viz.,*Crop Production (I & II), Crop Improvement, Crop Protection and Social Sciences& others.

## RESEARCH

Small and marginal farmers play a vital role in the state's agricultural sector. Raising the crop production is one of the most important factor to double their farm income. The research in UAS, Bangalore has a vision to generate cutting edge farm technologies for transforming agriculture to make it profitable for the farmers and to meet the growing demand for food. The emphasis is on developing technologies with local relevance that is both sustainable and environmentally sound. Adaption of new varieties as well as new production technologies can potentially strengthen farmers cropping systems by increasing yields, improving drought resilience, boosting resistance to pests and diseases and also capture new market opportunities.

The University coordinates location specific, strategic and anticipatory research programmes in 13 Agricultural Research Stations situated in 10 Southern Districts of the state, mainly to address issues of small and marginal farmers to improve their standard of living while ensuring food security by enhancing productivity and enhancing agricultural resources efficiency with no adverse effects.

**ಕಾರ್ಯಾಚರಣೆಯಲ್ಲಿರುವ ಪ್ರಾಯೋಜನೆಗಳು (31–03–2022 ರಂತೆ)**

ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಒಟ್ಟು 268 ಸಂಶೋಧನಾ ಪ್ರಾಯೋಜನೆಗಳು ಕಾರ್ಯಾಚರಣೆಯಲ್ಲಿದ್ದು, ಅವುಗಳಲ್ಲಿ 31 ಅಖಿಲ ಭಾರತ ಸಹಯೋಜಿತ ಸಂಶೋಧನಾ ಪ್ರಾಯೋಜನೆಗಳು, 4 ಸ್ವಯಂ ಪ್ರೇರಿತ ಕೇಂದ್ರಗಳು, ಒಂದು ಪ್ರಾಯೋಜನಾ ಸಂಯೋಜನಾ ಘಟಕ ಮತ್ತು ಒಂದು ಪ್ರಾಯೋಜನಾ ಸಮನ್ವಯ ಘಟಕ, 14 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಪ್ರಾಯೋಜನೆಗಳು, 5 ಗೌರವಾನ್ವಿತ ವಿಜ್ಞಾನಿಗಳ ಪ್ರಾಯೋಜನೆಗಳು, 7 ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ತಾತ್ಪೂರಿತ ಪ್ರಾಯೋಜನೆಗಳು, 85 ಭಾರತ ಸರ್ಕಾರದ ಪ್ರಾಯೋಜನೆಗಳು (ಡಿ.ಎಸ್.ಟಿ./ ಡಿ.ಬಿ.ಟಿ.), 44 ಕರ್ನಾಟಕ ಸರ್ಕಾರದ ಪ್ರಾಯೋಜನೆಗಳು; 43 ಇತರೆ ಏಜೆನ್ಸಿಗಳ ಅನುದಾನದ ಪ್ರಾಯೋಜನೆಗಳು ಹಾಗೂ 33 ಕೃ.ವಿ.ವಿ. ಅನುದಾನಿತ ಸಂಶೋಧನಾ ಪ್ರಾಯೋಜನೆಗಳು (ಕೃ.ವಿ.ವಿ. ಅನುದಾನಿತ ಪ್ರಾಯೋಜನೆಗಳು: 19 ತಳಿ/ತಾಂತ್ರಿಕತೆ ಅಭಿವೃದ್ಧಿ ಮತ್ತು ಮೌಲ್ಯವರ್ಧನೆ ಪ್ರಾಯೋಜನೆಗಳು, 6 ರೈತ ಕೇಂದ್ರಿತ ಪ್ರಾಯೋಜನೆಗಳು ಮತ್ತು 8 ಹವಾಮಾನ ಸಹಿಷ್ಣು ಕೃಷಿ ಪ್ರಾಯೋಜನೆಗಳು) ಕಾರ್ಯಾಚರಣೆಯಲ್ಲಿವೆ.

**ಅನುಮೋದಿಸಲಾದ ಹೊಸ ಪ್ರಾಯೋಜನೆಗಳು**

2021–22ರ ಸಾಲಿನಲ್ಲಿ ಒಟ್ಟು ರೂ.5378.5 ಲಕ್ಷಗಳ 33 ಹೊಸ ಪ್ರಾಯೋಜನೆಗಳು ಮಂಜೂರಾಗಿದ್ದು (3 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಪ್ರಾಯೋಜನೆಗಳು, 1 ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ತಾತ್ಪೂರಿತ ಪ್ರಾಯೋಜನೆ, 18 ಭಾರತ ಸರ್ಕಾರದ ಪ್ರಾಯೋಜನೆಗಳು, 4 ಕರ್ನಾಟಕ ಸರ್ಕಾರದ ಪ್ರಾಯೋಜನೆಗಳು; 7 ಇತರೆ ಏಜೆನ್ಸಿಗಳ ಅನುದಾನದ ಪ್ರಾಯೋಜನೆಗಳು). ಇದರ ಜೊತೆಗೆ ಕೃ.ವಿ.ವಿ.ಯು ಸ್ಥಾನಿಕ ಸಮಸ್ಯೆಗಳ ಕುರಿತ 6 ಸಂಶೋಧನಾ ಪ್ರಾಯೋಜನೆಗಳಿಗೆ (3 ತಳಿ/ ತಾಂತ್ರಿಕತೆ ಅಭಿವೃದ್ಧಿ ಮತ್ತು ಮೌಲ್ಯವರ್ಧನೆ ಪ್ರಾಯೋಜನೆಗಳು, 2 ರೈತಕೇಂದ್ರಿತ ಪ್ರಾಯೋಜನೆಗಳು ಮತ್ತು 1 ಹವಾಮಾನ ಸಹಿಷ್ಣು ಕೃಷಿ ಪ್ರಾಯೋಜನೆ) ಅನುದಾನವನ್ನು ನೀಡಿದೆ.

**ಪರೀಕ್ಷಿಸಿದ ಹೊಸ ರಾಸಾಯನಿಕಗಳು/ತಳಿಗಳು/ಅಣುಗಳು**

ವಿಶ್ವವಿದ್ಯಾನಿಲಯವು 474 ಹೊಸ ತಳಿಗಳು/ ಸಾಲುಗಳು/ರಾಸಾಯನಿಕಗಳು / ಅಣುಗಳನ್ನು ಪೀಡೆ, ರೋಗ, ಕಳೆ, ನಿಯಂತ್ರಣಕ್ಕಾಗಿ, ಮಣ್ಣು ವಿಶ್ಲೇಷಣೆಗಾಗಿ ಹಾಗೂ ಕೃಷಿ ಉಪಕರಣಗಳನ್ನು ಪರೀಕ್ಷಿಸಿದ್ದು ಅವುಗಳಿಂದ ಒಟ್ಟುರೂ. 616.49 ಲಕ್ಷ ಆದಾಯವನ್ನು ಗಳಿಸಿದೆ.

**ಸಂಶೋಧನೆಯ ಪ್ರಮುಖಾಂಶಗಳು**

- **ವಿಶ್ವದಲ್ಲೇ ಮೊಟ್ಟ ಮೊದಲ ಬಾರಿಯಾಗಿ ಹುರುಳಿಯ ವಂಶವಾಹಿ ಸರಣಿ ಮಾಡಲಾಗಿದೆ:** ವಿಶ್ವದಲ್ಲೇ ಮೊಟ್ಟ ಮೊದಲ ಬಾರಿಗೆ ಇಲ್ಯುಮಿನ ಮತ್ತು ಪ್ಯಾಕಿಬೊ ತಂತ್ರಜ್ಞಾನವನ್ನು ಅಳವಡಿಸಿ ಹುರಳಿಯ ಪಿ.ಎಚ್.ಜಿ–9 ತಳಿಯ ವಂಶವಾಹಿಯ ಸರಣಿ ಮಾಡಲಾಗಿದೆ. ಈ ವಂಶವಾಹಿಯ ಕರಡು ಸರಣಿಗಳನ್ನು ಉಪಯೋಗಿಸಿ ಸಸಾರಜನಕ ಭರಿತ, ಬರ ನಿರೋಧಕತೆ, ಪ್ರತಿ–ಉತ್ಕರ್ಷಣೆ, ಪ್ರತಿ–ಜೀವಕ್ರಿಯಾತ್ಮಕಕ್ಕೆ ಅನುಗುಣವಾದ ತಳಿ ಅಭಿವೃದ್ಧಿಪಡಿಸಬಹುದಾಗಿದೆ.

- **ನುಸಿಯ ವಂಶಾವಾಹಿಯ ಸರದಿಗಳನ್ನು ಪ್ರಭೇದಿಸಲಾಗಿದೆ:** 2021–22 ನೇ ಸಾಲಿನಲ್ಲಿ 28 ಸಸ್ಯಾವಲಂಭಿ ನುಸಿಪ್ರಭೇದಗಳ 103 ಡಿ.ಎನ್.ಎ. ಮಾಹಿತಿಯನ್ನು ವೃದ್ಧಿಪಡಿಸಲಾಗಿದ್ದು ಅವುಗಳ ಅನುಕ್ರಮಣಿಕೆಗಳನ್ನು ಎನ್.ಸಿ.ಬಿ.ಐ. ಜೆನ್‌ಬ್ಯಾಂಕ್ ಮಾಹಿತಿ ಸಂಗ್ರಹಣೆಯಲ್ಲಿ ದೃಢಪಡಿಸಲಾಗಿದೆ. ಈ ಮಾಹಿತಿಯು ಭೌಗೋಳಿಕ ವಿಸ್ತಾರಕ್ಕೆ ಅನುಗುಣವಾಗಿ ಬಹುಭಕ್ಷಕ ಜಾತಿಯ ಕೀಟಗಳ ಮತ್ತು ಅದರ ರೂಪು ರೇಶೆಗಳ ಮಾಹಿತಿಯ ಅಧ್ಯಾಯನಕ್ಕೆ ಅನುವು ಮಾಡಿಕೊಡುತ್ತದೆ

## Projects in Operation (As on 31-03-2022)

A total of 268 research projects are in operation, of which 31 are All India Coordinated Research Projects, 4-Voluntary Centre's, 1-Project Coordinating Unit on Small Millets,1-Network unit on Agricultural Acarology, 14-RKVY projects, 5-Emeritus Scientists, 7-ICAR *Ad-hoc* projects; 85-Government of India Projects (DST/DBT); 44-Government of Karnataka Projects; 43-projects funded by other agencies and 33-Research projects : 19- Projects on Varietal Development and Value-addition; 6-Farmer Centric & 8-Climate Smart Agriculture) sponsored by the University to tackle the problems of the farmers in the State in general.

## New Research Projects:

A total of 39 new research projects (RKVY: 3, ICAR *Ad-hoc* project: 1, Government of India:18, Government of Karnataka:4 and other funding agencies:7) have been sanctioned to the University during 2021-22 by various funding agencies with a total outlay of Rs. 5378.5 lakhs. University has sponsored six Research Projects [Varietal development and value addition-3, Farmer Centric-2 and Climate Smart Agriculture-1] based on local problems.

## New Chemicals/ Varieties/ Molecules Tested

The University has undertaken the testing of 474 new varieties /lines/ chemicals/ molecules for control of pests, diseases, weeds, soil analysis and agricultural equipments and has generated revenue of Rs. 616.49 lakhs.

## Break-through Research

- **Pioneer in Genome sequencing of Horsegram in the world:** Horsegram variety PHG-9, Genome was decoded and sequenced for the first time in the World using the New Generation Technology (combination of Illumina and Pacbio technologies). This draft genome sequence provides opportunities to explore this crop for its desirable traits like drought tolerance, antioxidant activity, antimicrobial properties and high protein.
- **Genome sequencing of Mite species:** During 2021-22, a total of 103 DNA sequences of 28 species of mites are submitted to NCBI - GenBank database. It paves a way to study the genetic variability of polyphagous species across host plants and geographical locations.

**ಸಂಶೋಧನೆಯ ಮುಖ್ಯಾಂಶಗಳು**

**ಬಿಡುಗಡೆಗೆ ಶಿಫಾರಸ್ಸು ಮಾಡಲಾದ ನೂತನ ತಳಿಗಳು**

ಎಮ್.ಎ.ಎಚ್–14–138, ಮೆಕ್ಕೆ ಜೋಳದ ಸಂಕರಣ ತಳಿಯ ಜೊತೆಗೆ ಭತ್ತದ ಕೆ.ಎಮ್.ಪಿ.–225, ಕೊರಲೆಯ ಜಿ.ಪಿ.ಯು.ಬಿ.ಟಿ.–2, ಅವರೆಯ ಎಚ್.ಎ.–5, ಎಳ್ಳಿನ ಜಿ.ಕೆ.ವಿ.ಕೆ.ಎಸ್.–1, ಹುಚ್ಚೆಳ್ಳಿನ ಕೆ.ಬಿ.ಎನ್.–2 ಮತ್ತು ಮೇವಿನ ಜೋಳದ ಸಿ.ಎನ್.ಎಫ್.ಎಸ್.–1 ತಳಿಯನ್ನೊಳಗೊಂಡಂತೆ ಆರು ತಳಿಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆಗೆ ಶಿಫಾರಸ್ಸು ಮಾಡಲಾಗಿದೆ. ಭತ್ತದ ಆರ್.ಎನ್.ಆರ್.–15048 ಮತ್ತು ಹರಳು ಬೆಳೆಯ ಐ.ಸಿ.ಎಚ್.–66 ಸಂಕರಣ ತಳಿಯನ್ನು ಬಿಡುಗಡೆಗೆ ಅನುಮೋದಿಸಲಾಗಿದೆ.

**ಅಧಿಸೂಚನೆಯಲ್ಲಿ ನೋಂದಾಯಿಸಲಾದ ತಳಿಗಳು**

ವಿಶ್ವವಿದ್ಯಾನಿಲಯವು ಅಭಿವೃದ್ಧಿಪಡಿಸಿರುವ ಅಲಸಂದೆಯ ಪಿ.ಜಿ.ಸಿ.ಪಿ.–6 ಮತ್ತು ಕೆ.ಬಿ.ಸಿ.–11, ಕಬ್ಬಿನ ಸಿ.ಒ.ವಿ.ಸಿ.–16061 ಮತ್ತು ಸಿ.ಒ.ವಿ.ಸಿ.–16062, ಸೋಯಾಅವರೆಯ ಕೆ.ಬಿ.ವಿ.ಎಸ್.–1, ಉದ್ದಿನ ಕಾಳಿನ ಎಲ್.ಬಿ.ಜಿ.–791 ಹಾಗೂ ಮೇವಿನ ಅಲಸಂದೆಯ ಎಮ್.ಎಫ್.ಸಿ–09–03 ತಳಿಗಳನ್ನು ಭಾರತ ಸರ್ಕಾರದ ಅಧಿಸೂಚನೆಯಲ್ಲಿ (ಎಸ್.ಒ. 8 (ಈ) ದಿನಾಂಕ 24.12.2021) ನೋಂದಾಯಿಸಲಾಗಿದೆ.

**ಸುಧಾರಿತ ಬೇಸಾಯ ಪದ್ಧತಿಗಳ ಕೈಪಿಡಿಯಲ್ಲಿ ಸೇರ್ಪಡೆಗೆ ಶಿಫಾರಸ್ಸು ಮಾಡಲಾದ ನೂತನ ತಾಂತ್ರಿಕತೆಗಳ ವಿವರ**

ಬೆಳೆ ಉತ್ಪಾದನೆಯ 16 ತಾಂತ್ರಿಕತೆಗಳು, ಬೆಳೆ ಸಂರಕ್ಷಣೆಯ 18 ತಾಂತ್ರಿಕತೆಗಳು, ಜೇನುಕೃಷಿಯ 2 ತಾಂತ್ರಿಕತೆಗಳು ಮತ್ತು ರೇಷ್ಮೆಕೃಷಿಯ ಒಂದು ತಾಂತ್ರಿಕತೆಗಳನ್ನೊಳಗೊಂಡ ವಿವಿಧ ಬೆಳೆಗಳ ಒಟ್ಟು 37 ನೂತನ ತಾಂತ್ರಿಕತೆಗಳನ್ನು ಸುಧಾರಿತ ಬೇಸಾಯ ಪದ್ಧತಿಗಳ ಕೈಪಿಡಿಯಲ್ಲಿ ಸೇರ್ಪಡೆಗೆ ಶಿಫಾರಸ್ಸು ಮಾಡಲಾಗಿದೆ.

**ಹೊಸ ಸಂಶೋಧನೆಗೆ ಪೇಟೆಂಟ್**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ 4 ಆಸ್ಟ್ರೇಲಿಯಾದ ಪೇಟೆಂಟ್‌ಗಳು, ಒಂದು ಜರ್ಮನಿಯ ಪೇಟೆಂಟ್ ಮತ್ತು ಒಂದು ಭಾರತೀಯ ಪೇಟೆಂಟ್ ದೊರಕಿವೆ.

| ಅನ್ವೇಷಣೆಯ ಶೀರ್ಷಿಕೆ | ಪೇಟೆಂಟ್ ಸಂಖ್ಯೆ | ದೊರಕಿದ ದಿನಾಂಕ |
|---|---|---|
| ದಾಳಿಂಬೆಯಲ್ಲಿ ಸುಪ್ತ ಕ್ಯಾಪ್ ಸೋಂಕನ್ನು ಕಂಡುಹಿಡಿಯಲು ವರ್ಧಿಸಿದ ಲೂಪ್ ಬಳಕೆಯ ಐಸೋಥರ್ಮಲ್ ಆಂಪ್ಲಿಫಿಕೇಶನ್ ವಿಧಾನ | IP Australia 2021101342 | 28.4.2021 |
| ಕಬ್ಬು ಸಂವರ್ಧನೆಗೆ ಒಂದು ಸಲಕರಣೆ ಮತ್ತು ವಿಧಾನ | IP Australia 2021102640 | 16.6.2021 |
| ಬ್ಯಾಕ್ಟೀರಿಯಾ ಎಲೆ ಅಂಗಮಾರಿ ರೋಗಕ್ಕೆ ಸಹಿಷ್ಣುತೆ ಹೊಂದಿರುವ ಭತ್ತದ ಆರ್ ವಂಶವಾಹಿಗಳ ಕ್ಷಿಪ್ರ ಜೀನೋಟೈಪಿಂಗ್‌ಗಾಗಿ ಲ್ಯಾಂಪ್ ತಂತ್ರಜ್ಞಾನದ ಬಳಕೆ | IP Australia 2021103516 | 28.7.2021 |
| ಭತ್ತದ ಬೀಜದಲ್ಲಿ ಲ್ಯಾಂಪ್ ತಂತ್ರಜ್ಞಾನ ಆಧಾರದ ಮಡಚಬಲ್ಲ ಮೇಂಬ್ರೆನ್ ಪ್ಲಾಟ್‌ಫಾರಂ ಬಳಸಿ ಮ್ಯಾಗ್ನಪೋರ್ಥಿಯೊರಯಜೇ ಹಾಗೂ ಸಾರೊಕ್ಲಾಡಿಯು ಮೊರೈಜೇಗಳ ಬಹುಸ್ತರ ಪತ್ತೆಹಚ್ಚುವಿಕೆ | IP Australia 2021103517 | 28.7.2021 |
| ಬತ್ತದ ಬೀಜದಲ್ಲಿ ಲ್ಯಾಂಪ್ ತಂತ್ರಜ್ಞಾನ ಆಧಾರದ ಏಕ–ಮಡಚುವಿಕೆ ಪ್ಲಾಟ್‌ಫಾರಂ ಬಳಸಿ ಮ್ಯಾಗ್ನಪೋರ್ಥಿಯೊರಯಜೇಯ ದ್ವಿಸ್ತರ ಪತ್ತೆಹಚ್ಚುವಿಕೆ. | IP Germany 202022100598 | 02.3.2022 |
| ಟೊಮ್ಯಾಟೊ (ಸೊಲ್ಯಾನಮ್ ಲೈಕೋಪರ್ಸಿಕಮ್) ಬ್ರೆಡ್ ತಯಾರಿಕೆಯ ವಿಧಾನ | Indian Patent 396430 | 09.5.2022 |
| ನಿರ್ವಾತ ವಾತಾವರಣದಲ್ಲಿ ಶೇಖರಣೆ ಮಾಡುವ ಯಂತ್ರ | Indian Patent 401836 | 22.7.2022 |
| ಕ್ಷಿಪ್ರ ಮತ್ತು ನಿಖರವಾದ ಪಾಯಿಂಟ್–ಆಫ್–ಕೇರ್ ಲ್ಯಾಂಪ್ ಕಲೊರಿಮೆಟ್ರಿಕ್ ಆಧಾರಿತ ರೋಗನಿರ್ಣಯದ ಡಿಪ್‌ಸ್ಟಿಕ್ | Indian Patent 401825 | 22.7.2022 |

## Research Highlights

### New Varieties released

During 2021-22, Six varieties *viz.,* 1 each in Rice (KMP-225), Browntop Millet (GPUBT-2), Field Bean (HA-5), Niger (KBN-2), Sesamum (GKVKS-1) and Fodder Sorghum (CNFS-1) and One Maize hybrid (MAH-14-138) were developed and released for different zones while one variety in rice (RNR-15048) and one castor hybrid (ICH-66) were endorsed and accepted for release.

### Varieties notified in Gazette

Varieties PGCP-6 and KBC-11 in Cowpea, CoVC-16061 and CoVC-16062 in Sugarcane, KBVS-1 variety in Soybean, LBG-791 variety of Blackgram and MFC-09-03 variety of Fodder cowpea that were developed by UASB were notified in the official gazette (SO 8(E)/ 24.12.2021) of Govt. of India.

### New Technologies Developed for Inclusion in Package of Practices

A total of 37 new technologies in various crops on different aspects including 16 crop production, 18 crop protection, one in sericulture and two in apiculture have been recommended for inclusion in the package of practices.

### Patent for Invention

Six patents including four Australian patents, one German patent and one Indian Patents have been granted to UAS, Bangalore

| Title of invention | Patent No. | Date of grant |
|---|---|---|
| Enhanced loop-mediated isothermal amplification method for detecting latent xap Infection in pomegranate | IP Australia 2021101342 | 28.4.2021 |
| An apparatus for sugarcane propagation and a method thereof | IP Australia 2021102640 | 16.6.2021 |
- Dr. M. L. Revanna, Professor, Department of Food Science and Nutrition, UAS-B was conferred with State level core committee membership for the year 2021-22 by Commissioner, Public Education, Vidhan Soudha. GOK for 'State level Mid-day Meal Programme Implementation'
- Dr. M. N. Venkataramana, Professor & Head Department of Agricultural Economics, CoA, GKVK, Bengaluru served as Chairman for Selection Committee for considering promotion cases of Scientific Personnel of ICAR-NIANP under the ICAR Career Advancement Scheme in the discipline of Agricultural Economics by ICAR-NIANP, Bengaluru on 23.12.2021
- Dr. G. M. Gaddi, Professor, Department of Agricultural Economics, CoA, GKVK was nominated as Member of Board of Examinations for the Rural Development and Panchayat Raj University, Gadag during 2021-22
- Dr. H.B. Raghu, Assistant Professor, Department of Forestry and Environmental Science, UAS, GKVK, Bangalore has been nominated as Member of State Committee for people's Biodiversity by the Karnataka Biodiversity Board, GoK, *w.e.f.* 2021-22.
- Dr. Srinivasappa, K.N., Professor, Department of Horticulture, CoA, GKVK and Principal Investigator-PFDC, Bangalore has been nominated as Member of Technical Committee to scrutinize and recommend drip /sprinkler component producing companies under Pradhan Mantri Krishi Sinchayi Yojana.
- Dr. S. Chandrashekhar, Professor, Department of Sericulture CoA, GKVK, Bangalore has been nominated as an expert for Secondary Agriculture Unit Committee, Department of Sericulture, Govt. of Karnataka *w.e.f.* 22-02-2022.

- ಡಾ. ಮಂಜುನಾಥ್‌ಗೌಡ, ಪ್ರಾಧ್ಯಾಪಕರು ಹಾಗು ಮುಖ್ಯಸ್ಥರು, ರೇಷ್ಮೆಕೃಷಿ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿ.ಕೆ.ವಿ.ಕೆ. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರೇಷ್ಮೆಕೃಷಿ ವಿಭಾಗದ ಅಧ್ಯಯನ ಮಂಡಳಿಯ ಸದಸ್ಯರಾಗಿ 2020ರಿಂದ ಕಾರ್ಯನಿರ್ವಹಿಸುತ್ತಿದ್ದು ಅದೇ ವಿಭಾಗದ ಸಿ.ಎಸ್.ಐ.ಆರ್. ಅನುದಾನಿತ ಸಂಶೋಧನೆ ಸಹಭಾಗಿತ್ವದ ಕಾರ್ಯಕ್ರಮದ ಪ್ರಥಮ ವರ್ಷದ ಪ್ರಗತಿಯ ಮಾಪನ ಮಾಡಲು ಮೂರು ಸದಸ್ಯರ ಸಮಿತಿಯ ಅಧ್ಯಕ್ಷರಾಗಿ 18.3.2022ರಂದು ಕಾರ್ಯನಿರ್ವಹಿಸಿರುತ್ತಾರೆ.

- ಡಾ. ಕೆ. ಪಿ. ರಘುಪ್ರಸಾದ್, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ಜಿ.ಕೆ.ವಿ.ಕೆ ಇವರು ಬೆಂಗಳೂರಿನ ಭಾರತೀಯ ಬಾಹ್ಯಕಾಶ ಸಂಶೋಧನ ಸಂಸ್ಥೆಯ ವಿಜ್ಞಾನಿಗಳ ಮುಂಬಡ್ತಿ ಸಮಿತಿಯಲ್ಲಿ ಬಾಹ್ಯ ವಿಷಯ ತಜ್ಞರಾಗಿ ನಾಮನಿರ್ದೇಶನಗೊಂಡಿರುತ್ತಾರೆ.

**ಸಮ್ಮೇಳನಗಳು / ಅಲ್ಪಾವಧಿಯ ಕೋರ್ಸ್‌ಗಳು / ಶೈಕ್ಷಣಿಕ ಪ್ರವಾಸಗಳಲ್ಲಿ ಭಾಗವಹಿಸುವಿಕೆ**

- ರಾಷ್ಟ್ರೀಯ ಬೀಜ ಪ್ರಾಯೋಜನೆಯ ವಿಜ್ಞಾನಿಗಳು 23ರಿಂದ 25ನೇ ಜೂನ್, 2021ರವರೆಗೆ ಬೀಜಕೇಂದ್ರ, ತಮಿಳುನಾಡು ಕೃಷಿ ವಿಶ್ವವಿದ್ಯಾನಿಲಯ, ಕೊಯಮತ್ತೂರು ಇವರು ಭಾರತೀಯ ತೃಣಧಾನ್ಯ ಸಂಶೋಧನಾ ಸಂಸ್ಥೆ, ಹೈದರಾಬಾದ್ ಇವರ ಸಹಯೋಗದೊಂದಿಗೆ ಆಯೋಜಿಸಿದ್ದ ಅಂತರಾಷ್ಟ್ರೀಯ ಇಂಡೋ–ಜರ್ಮನ್ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
- ಜಿಕೆವಿಕೆಯ ಕೃಷಿ ಮಹಾ ವಿದ್ಯಾಲಯದ ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿರುವ ಡಾ. ಮುರಳಿ ಮೋಹನ್‌ರವರು & ಡಾ. ರಾಜೆಂದ್ರ ಪ್ರಸಾದ್ ಬಿ. ಎಸ್. ವಿಜ್ಞಾನಿ (ಸಸ್ಯ ಸಂರಕ್ಷಣೆ) ಇವರು ರಾಷ್ಟ್ರೀಯ ಕೃಷಿ ಉನ್ನತ ಶಿಕ್ಷಣ ಪ್ರಾಯೋಜನೆಯ ಉನ್ನತ ಕೃಷಿ ಮತ್ತು ತಂತ್ರಜ್ಞಾನ ಕೇಂದ್ರದ ವತಿಯಿಂದ ಪ್ರಾಯೋಜಿತರಾಗಿ ಸ್ಪೇನ್ ದೇಶದ ಲೀಡಾ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ. 13.01.2022 ರಿಂದ 28.03.2022ರವರೆಗೆ ಆಯೋಜಿಸಲಾಗಿದ್ದ "ಪೀಡೆ ಮತ್ತು ರೋಗಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ನಾಮಿನಲ್ ಗ್ರೂಪ್ ಟೆಕ್ನಿಕ್ (ಎನ್.ಜಿ.ಟಿ.) ಅವಶ್ಯಕತೆ" ಎಂಬ ಅಂತರಾಷ್ಟ್ರೀಯ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದಾರೆ.

**ಆಯೋಜಿಸಿದ ತರಬೇತಿ ಕಾರ್ಯಕ್ರಮಗಳು/ಸಮಾವೇಶಗಳು/ಕಾರ್ಯಾಗಾರಗಳು**

1) ಎಂ.ಎಸ್ಸಿ, ಪಿ.ಎಚ್.ಡಿ ವಿದ್ಯಾರ್ಥಿಗಳಿಗೆ, ವಿವಿಧ ವಿಭಾಗಗಳ ಪ್ರಾಧ್ಯಾಪಕರಿಗೆ, ಸಹಾಯಕ ಗ್ರಂಥಪಾಲಕರಿಗೆ ಮತ್ತು ಗ್ರಂಥಾಲಯಗಳ ಉಸ್ತುವಾರಿ ಗ್ರಂಥಪಾಲಕರುಗಳಿಗೆ ಮೈಲಾಫ್ಟ್ ಮತ್ತು ಸೆಂಟೆನ್ನಿಯಾ ತಂತ್ರಾಂಶಗಳ ಬಳಕೆ ಮತ್ತು ಪ್ರವೇಶ ಕುರಿತು ದಿನಾಂಕ: 6ರಿಂದ 9 ಸೆಪ್ಟೆಂಬರ್ 2021ರವರೆಗೆ ಮತ್ತು ದಿನಾಂಕ 13.09.2021ರಂದು ವಿವಿಧ ವಿಭಾಗಗಳ ಪ್ರಾಧ್ಯಾಪಕರಿಗೆ ಪುನಶ್ಚೇತನ ಕಾರ್ಯಕ್ರಮವನ್ನು ನಡೆಸಲಾಯಿತು.
2) ವಿಭಾಗಗಳಲ್ಲಿ ಗ್ರಂಥಾಲಯ ನಿರ್ವಹಣೆ ಕುರಿತು ಆಂತರಿಕ ತರಬೇತಿ ಕಾರ್ಯಕ್ರಮವನ್ನು 2021ರ ಡಿಸೆಂಬರ್ 20ರಿಂದ 24ರವರೆಗೆ ಐದು ದಿನಗಳ ತರಬೇತಿ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಪ್ರಾಧ್ಯಾಪಕರಿಗೆ ನಡೆಸಲಾಯಿತು.
3) ವಿಶ್ವವಿದ್ಯಾನಿಲಯ ಗ್ರಂಥಾಲಯದಲ್ಲಿ ದಿನಾಂಕ 12.02.2022ರಂದು ಎಲ್ಲಾ ವಿಭಾಗಗಳ ಮುಖ್ಯಸ್ಥರಿಗೆ ಇ–ಸಂಪನ್ಮೂಲಗಳ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮವು ಎಲ್ಲಾ ವಿಭಾಗಗಳ ಮುಖ್ಯಸ್ಥರಿಗೆ ತುಂಬಾ ಪ್ರಯೋಜನಕಾರಿಯಾಗಿತ್ತು. IRINS ದತ್ತಾಂಶ ನಮೂದು ಮತ್ತು ಮೈಲಾಫ್ಟ್ ಬಳಕೆ ಇತ್ಯಾದಿ ವಿಷಯಗಳನ್ನು ಈ ತರಬೇತಿ ಕಾರ್ಯಕ್ರಮವು ಒಳಗೊಂಡಿತ್ತು. ಮಾರ್ಚ್ 2022ರ 7 ಮತ್ತು 9ರಂದು ಎಲ್ಲಾ ವಿಭಾಗಗಳ ವಿಜ್ಞಾನಿಗಳಿಗೆ ಮತ್ತು ಎ.ಐ.ಸಿ.ಆರ್.ಪಿ.ಯ ಸಿಬ್ಬಂದಿಗೂ ಸಹ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.
4) ಕೋವಿಡ್–19 ಸಂದರ್ಭದಲ್ಲಿ ಘಟಕಗಳು/ ಕೃಷಿ ವಿಜ್ಞಾನ ಕೇಂದ್ರಗಳವತಿಯಿಂದ ಆನ್‌ಲೈನ್ ತರಬೇತಿಗಳು/ವೆಬಿನಾರ್‌ಗಳನ್ನು ಲಾಕ್‌ಡೌನ್ ಬಿಕ್ಕಟ್ಟಿನ ಅವಧಿಯಲ್ಲಿ ಕೃಷಿ ಮತ್ತು ಸಂಬಂಧಿತ ವಿಷಯಗಳಲ್ಲಿ 227 ತರಬೇತಿ ಕಾರ್ಯಕ್ರಮಗಳನ್ನು 10656 ಜನರೈತರಿಗೆ ಹಮ್ಮಿಕೊಳ್ಳಲಾಗಿತ್ತು.

- Dr. Manjunath Gowda, Professor and Head, Department of Sericulture CoA, GKVK, Bangalore is serving as a member of Board of Studies in Sericulture (PG), University of Mysuru, since 2020 and served as the chairman of the three member committee constituted for Assessment of first year progress of CSIR funded Research Associateship at the Department of Studies in Sericulture, University of Mysore, Mysuru on 18.03.2022

- Dr. K. P. Raghuprasad, Professor & Head, ATIC, GKVK is serving as external expert for the scientists promotion committee (SE to SF) at ISRO, Bengaluru

**Participation in Conferences/ Short Courses/ Exposure Visits**

- Scientists of National Seed Project participated in on-line International Indo-German training programme on Seed enhancement techniques held from 23$^{rd}$ to 25$^{th}$, June 2021 organized by the Seed Centre, TNAU, Coimbatore in collaboration with ICAR-Indian Institute of Millet Research, Hyderbad.

- Dr. Murali Mohan, Professor, Department of Entomology, College of Agriculture, GKVK and Dr. Rajendra Prasad. B. S, Scientist (Plant Protection), KVK, Ramanagara attended the International Training at University of Lleida, Spain on "NGT for forecasting pests and disease outbreaks for effective management" under Centre for Advanced Agricultural Science and Technology (CAAST) of National Agricultural Higher Education Project from 13.01.2022 to 28.03.2022

**Training Programmes/Conferences/ Workshops/ Organized**

1) Orientation Programme for accessing My Loft (My librarian on fingertips) and Sententia Softwares' was conducted from 6$^{th}$ to 9$^{th}$ September, 2021, for M.Sc, Ph.D. students Departments and for the faculty, Assistant Librarians and Library In-charge on 13.09.2021

2) Five days in house training programme on Library Management in Departments was conducted from 20-24 December, 2021 to the faculty of the University at University Library, GKVK

3) One day Training Programme on Use of e-Resources was held on 12.02.2022 to all the Head of the Departments at University Library, GKVK. Similar programme was organised for faculty and scientists of AICRP schemes on 7th and 9th March, 2022.

4) About 227 Online training programmes / Webinars during COVID-19 situation were organized by KVKs / Units on various topics related to Agriculture and allied subjects covering 10656 farmers.

5) ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಆಹಾರ ಮತ್ತು ಪೌಷ್ಟಿಕಾಂಶದ ಸುರಕ್ಷತೆಯನ್ನು ಸಾಧಿಸಲು ಸಮರ್ಥ ರಾಗಿಯ ಬೆಳೆ – ಸವಾಲುಗಳು ಮತ್ತು ಭವಿಷ್ಯ ಕುರಿತು ಜನವರಿ, 2022ರ 19–22ರವರೆಗೆ ವಲಯ ಕೃಷಿ ಸಂಶೋಧನಾ ಕೇಂದ್ರ, ಮಂಡ್ಯದಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ – ಭಾರತೀಯ ತೃಣ ಧಾನ್ಯಗಳ ಸಂಶೋಧನಾ ಸಂಸ್ಥೆ, ಹೈದರಾಬಾದ್ ಮತ್ತು ಅಂತರಾಷ್ಟ್ರೀಯ ಅರೆ ಶುಷ್ಕ ಹಾಗೂ ಉಷ್ಣ ವಲಯ ಬೆಳೆಗಳ ಸಂಶೋಧನಾ ಸಂಸ್ಥೆ, ಹೈದರಾಬಾದ್ ಇವರ ಸಹಯೋಗದೊಂದಿಗೆ ಅಂತರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿತ್ತು.

6) ಪೆಟ್ರೋಲಿಯಂ ಸಂರಕ್ಷಣೆ ಸಂಶೋಧನಾ ಸಂಸ್ಥೆ, ದಕ್ಷಿಣ ವಲಯ ಇವರ ಹಣಕಾಸಿನ ನೆರವಿನಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಕೃಷಿ ವಿಜ್ಞಾನ ಕೇಂದ್ರಗಳು (7) ಕೃಷಿಯಲ್ಲಿ ಪೆಟ್ರೋಲಿಯಂ ಸಂರಕ್ಷಣೆ ಎಂಬ ವಿಷಯದ ಕುರಿತು 35 ಒಂದು ದಿನದ ಕೃಷಿ ಕಾರ್ಯಗಾರಗಳನ್ನು ಆಯೋಜಿಸಿ 950 ರೈತ/ರೈತ ಮಹಿಳೆಯರಿಗೆ ಕೃಷಿ ಕ್ಷೇತ್ರದಲ್ಲಿ ಹೇಗೆ ಇಂಧನ ಉಳಿತಾಯ ಮಾಡಬೇಕು ಎಂಬುದರ ಕುರಿತು ಅರಿವು ಮೂಡಿಸಲಾಯಿತು.

7) ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶನಾಲಯವು ಕೃಷಿ ವಿಜ್ಞಾನ ಕೇಂದ್ರ ಹಾಡೋನಹಳ್ಳಿಯಲ್ಲಿ ಕೃಷಿ ವಿಶ್ವವಿದ್ಯಾನಿಲಯದ "ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ತಾಂತ್ರಿಕ ಸಾಮರ್ಥ್ಯಗಳ ವೃದ್ಧಿ" ಎಂಬ ವಿಷಯದ ಕುರಿತು ಬಾಗವಹಿಸುವಿಕೆ ಕಾರ್ಯಗಾರವನ್ನು ಆಯೋಜಿಸಿತ್ತು.

8) ವಿಶ್ವವಿದ್ಯಾನಿಲಯದ ಸಿಬ್ಬಂದಿ ತರಬೇತಿ ಘಟಕದವತಿಯಿಂದ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಬೆಂಗಳೂರು ಇಲ್ಲಿ ದಕ್ಷಿಣ ಕರ್ನಾಟಕದ ಜಿಲ್ಲೆಗಳ ಎ.ಟಿ.ಎಂ.ಎ. ಸಿಬ್ಬಂದಿಗಳಿಗೆ ಆತ್ಮ ಯೋಜನೆ ಪ್ರಗತಿ ಪರಿಶೀಲನಾ ಕಾರ್ಯಗಾರವನ್ನು ಆಯೋಜಿಸಲಾಗಿತ್ತು.

9) ಬೇಕರಿ ತರಬೇತಿ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು "ಕೋವಿಡ್–19 ಸಾಂಕ್ರಾಮಿಕ ಸಮಯದಲ್ಲಿ ಆರೋಗ್ಯಕರ ಜೀವನ ಶೈಲಿ" ಕುರಿತು ಉಪನ್ಯಾಸವನ್ನು ಆಯೋಜಿಸಿತ್ತು ಹಾಗೂ ಇದರಲ್ಲಿ ಒಟ್ಟು 195 ಜನರು ಭಾಗವಹಿಸಿದ್ದು ಉಪನ್ಯಾಸದ ಲಾಭ ಪಡೆದುಕೊಂಡರು.

10) ರೈತತರಬೇತಿ ಸಂಸ್ಥೆ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು "ಗ್ರಾಮೀಣ ಉದ್ದಿಮೆದಾರಿಕೆ ಮತ್ತು ಯುವ ಸಬಲೀಕರಣದ" ಬಗ್ಗೆ ಜಿಕೆವಿಕೆಯಲ್ಲಿ ಒಂದು ದಿನದ ಕಾರ್ಯಕ್ರಮವನ್ನು ಆಯೋಜಿಸಿದ್ದು ಅದರಲ್ಲಿ 160 ಯುವರೈತರು ಭಾಗವಹಿಸಿದ್ದರು.

### ಇತರ ಪ್ರಮುಖ ಚಟುವಟಿಕೆಗಳು

### ಆಯೋಜಿಸಿದ್ದ ಕೃಷಿಮೇಳ ಮತ್ತು ಕ್ಷೇತ್ರೋತ್ಸವಗಳು

1. ಕೃಷಿಮೇಳ–2021: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 2021ರ ಕೃಷಿಮೇಳವನ್ನು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ನವೆಂಬರ್ 11ರಿಂದ 14ರವರೆಗೆ "ರೈತರ ಆದಾಯ ದ್ವಿಗುಣಗೊಳಿಸುವಿಕೆಗೆ ಕೃಷಿ ತಾಂತ್ರಿಕತೆಗಳು" ಎಂಬ ಘೋಷವಾಕ್ಯದೊಂದಿಗೆ ಭೌತಿಕ ಮತ್ತು ವರ್ಚುಯಲ್ ಮಾದರಿಯಲ್ಲಿ ಆಯೋಜಿಸಿತ್ತು. ಕೃಷಿಮೇಳವನ್ನು ಕರ್ನಾಟಕ ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳು, ಕರ್ನಾಟಕ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳು, ಐ.ಸಿ.ಎ.ಆರ್. ಸಂಸ್ಥೆಗಳು, ಖಾಸಗಿ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳ ಸಹಯೋಗದೊಂದಿಗೆ ನೆರವೇರಿಸಲಾಯಿತು. ಕೃಷಿ ಮೇಳವನ್ನು ಕೃಷಿ ಮತ್ತು ಗಡಿನಾಡು ತಂತ್ರಜ್ಞಾನಗಳ ಹಾಗೂ ರೈತ ಚಟುವಟಿಕೆಗಳ ಕುರಿತು ರೈತ ಸಮುದಾಯದಲ್ಲಿ ಅರಿವು ಮೂಡಿಸಲು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆಯ ಆದಿವಾಸಿ ರೈತ ಮಹಿಳೆ ಶ್ರೀಮತಿ ಪ್ರೇಮಾದಾಸಪ್ಪರವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ 10 ಬೆಳೆ ತಳಿಗಳು ಮತ್ತು 18 ಹೊಸ ಕೃಷಿ ತಂತ್ರಜ್ಞಾನಗಳ ಬಿಡುಗಡೆ ಮಾಡಲಾಯಿತು. ನಾಲ್ಕು ದಿನಗಳ ಮೇಳದಲ್ಲಿ ತುಮಕೂರು, ಚಿಕ್ಕಬಳ್ಳಾಪುರ, ಚಾಮರಾಜನಗರ, ಹಾಸನ, ಕೋಲಾರ, ಮಂಡ್ಯ, ಮೈಸೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಮತ್ತು ರಾಮನಗರ ಜಿಲ್ಲೆಗಳ ಪ್ರಗತಿಪರ ರೈತರಿಗೆ 140 ಪ್ರಶಸ್ತಿಗಳು ಮತ್ತು ಏಳು ರಾಜ್ಯ ಮಟ್ಟದ ಅತ್ಯುತ್ತಮ ರೈತ ಮತ್ತು ವಿಸ್ತರಣಾ

5) International Conference on 'Harnessing the potential finger millet for achieving food and nutritional security: Challenges and prospects (ICFM-22)' from 19-22 January, 2022 at Zonal Agricultural Research Station, Mandya, organised by UAS, Bangalore in collaboration with ICAR-Indian Institute of Millet Research, Hyderabad and International Crops Research Institute for the Semi Arid Tropics, Hyderabad.

6) KVKs of UAS-B in collaboration with Petroleum Conservation Research Association (PCRA) Southern Region have organized 35 one day Agricultural Workshops on Sensitization of farmers in minimization and conservation techniques of petrol in agriculture for 950 farmers in their respective districts.

7) The Directorate of Extension, UAS, Bangalore has organized Participatory Workshop on "Enhancing the Technical Competencies of KVK Scientists" at KVK, Bangalore Rural District.

8) The Staff Training Unit, Bangalore organized ATMA Progress Review workshop for ATMA Staff of Southern Karnataka at UAS, GKVK, Bengaluru

9) Bakery Training Unit, Directorate of Extension organized lecture series on "Healthy lifestyle during COVID-19 pandemic".

10) Farmers' Training Institute UAS, Bangalore organized one day Workshop on "Rural Entrepreneurship and Youth Empowerment" at GKVK, Bengaluru

**Other Important Activities**

**Krishimela /Field days organized**

1. **Krishimela-2021:** The University of Agricultural Sciences, Bangalore organized Krishimela-2021 from 11th to 14th November, 2021 at GKVK campus, Bangalore as an annual event of the University with the theme of "Agricultural technologies for Doubling of farmers Income" in both Physical and virtual mode. As a part of Krishimela, the agricultural exhibition in collaboration with Development Departments of Govt. of Karnataka, the farm universities in the state, ICAR institutes, Private and Public sector organisations was organised to create awareness among the farming community on the frontier technologies in agriculture and allied activities. The event was inaugurated by Mrs. Prema Dasappa, tribal farm women from HD Kote of Mysore district. During the event, 10 crop varieties and 18 new farm technologies were released. In four days of the mela, 140 awards were given to the progressive farmers of Tumkur, Chikkaballapur, Chamarajanagara, Hassan, Kolar, Mandya Mysore, Bangalore Rural, Bangalore Urban and Ramanagara districts and seven state level awards of Best Farmer and Extension workers were

ಕಾರ್ಯಕರ್ತ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಯಿತು. ಕೃಷಿ ಪರಿಕರಗಳ ಮಳಿಗೆಗಳು, ಅಭಿವೃದ್ಧಿ ಇಲಾಖೆಗಳ ಮಳಿಗೆಗಳು, ನವೋದ್ಯಮಗಳ ಮಳಿಗೆಗಳು ರೈತ ಸಮುದಾಯದ ಅನುಕೂಲಕ್ಕಾಗಿ ತಮ್ಮ ತಂತ್ರಜ್ಞಾನಗಳನ್ನು ಸುಮಾರು 500ಕ್ಕೂ ಹೆಚ್ಚು ಮಳಿಗೆಗಳಲ್ಲಿ ಪ್ರದರ್ಶಿಸಿದವು. ಕೃಷಿಮೇಳ–2021ಕ್ಕೆ ಸುಮಾರು 8 ಲಕ್ಷ ಜನರು ಖುದ್ದಾಗಿ ಭೇಟಿ ನೀಡಿದ್ದಾರೆ ಮತ್ತು 38.11 ಲಕ್ಷ ಜನರು ಮೇಳದಲ್ಲಿ ಆನ್‌ಲೈನ್ ಮೂಲಕ ಭಾಗವಹಿಸಿದ್ದಾರೆ.

2. ಮಂಡ್ಯದ ವಿ.ಸಿ. ಫಾರಂ ಆವರಣದಲ್ಲಿ **"ವೈವಿಧ್ಯ ಕೃಷಿ–ರೈತರಿಗೆ ಖುಷಿ"** ಶೀರ್ಷಿಕೆಯಡಿ 2021ರ ಡಿಸೆಂಬರ್ 1 ಮತ್ತು 2ರಂದು ಎರಡು ದಿನಗಳ ಕೃಷಿಮೇಳವನ್ನು (ಭೌತಿಕ ಮತ್ತು ಡಿಜಿಟಲ್) ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಕೃಷಿ, ತೋಟಗಾರಿಕೆ, ರೇಷ್ಮೆ, ಅರಣ್ಯ, ಪಶುಸಂಗೋಪನೆ, ಮೀನುಗಾರಿಕೆ ಇಲಾಖೆಗಳು, ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಮತ್ತು ತುಮಕೂರು ಜಿಲ್ಲೆ ಹಾಗೂ ಕಾವೇರಿ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿತ್ತು.

3. ಮಂಡ್ಯದ ವಿ.ಸಿ. ಫಾರಂನ ವಲಯ ಕೃಷಿ ಸಂಶೋಧನಾ ಕೇಂದ್ರದಲ್ಲಿ **"ಸ್ವಾವಲಂಬನೆಗಾಗಿ ಯಾಂತ್ರೀಕೃತ ಕೃಷಿ"** ಶೀರ್ಷಿಕೆಯಡಿ ರೈತರ ಏಳಿಗೆಗಾಗಿ ಕೃಷಿ ಯಂತ್ರೋಪಕರಣಗಳ ಪ್ರಾಮುಖ್ಯತೆ ಮತ್ತು ಬಳಸುವ ವಿಧಾನದ ಕುರಿತು ಅರಿವು ಮೂಡಿಸುವ ಸಲುವಾಗಿ ದಿನಾಂಕ 30–03–2022ರಂದು ಒಂದು ದಿನದ ಕೃಷಿ ಯಂತ್ರೋಪಕರಣಗಳ ಮೇಳವನ್ನು ಹಮ್ಮಿಕೊಳ್ಳಲಾಗಿತ್ತು. ಈ ಮೇಳವನ್ನು ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಅಡಿಯಲ್ಲಿ ಬರುವ ಅಖಿಲ ಭಾರತ ಸುಸಂಘಟಿತ ಕೃಷಿ ಯಂತ್ರೋಪಕರಣಗಳ ಸಂಶೋಧನಾ ಪ್ರಾಯೋಜನೆ, ವಲಯ ಕೃಷಿ ಸಂಶೋಧನಾ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರ, ಕೃಷಿ ಮಹಾವಿದ್ಯಾಲಯ, ವಿ.ಸಿ.ಫಾರಂ, ಮಂಡ್ಯ, ಅಖಿಲ ಭಾರತ ಸುಸಂಘಟಿತ ಕೊಯ್ಲಿನೋತ್ತರ ತಂತ್ರಜ್ಞಾನ ಮತ್ತು ಇಂಜಿನಿಯರಿಂಗ್ ಸಂಶೋಧನಾ ಪ್ರಾಯೋಜನೆ, ಜಿ.ಕೆ.ವಿ.ಕೆ., ಬೆಂಗಳೂರು ಹಾಗೂ ಅಖಿಲ ಭಾರತ ಸುಸಂಘಟಿತ ಕೃಷಿ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳಲ್ಲಿ ಶಕ್ತಿ ಬಳಕೆಯ ಸಂಶೋಧನಾ ಪ್ರಾಯೋಜನೆ, ಐ.ಐ.ಎಚ್.ಆರ್., ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿತ್ತು.

4. ಬೇಕರಿ ತರಬೇತಿ ಕೇಂದ್ರ, ಹೆಬ್ಬಾಳ, ಬೆಂಗಳೂರು ಇವರು **"ಸಾಮಾಜಿಕ ವಿಜ್ಞಾನದಲ್ಲಿ ಸಂಶೋಧನಾ ವಿಧಾನಗಳು ಮತ್ತು ಅನ್ವಯಗಳಲ್ಲಿ ಪ್ರಗತಿ"** ಕುರಿತ 10 ದಿನಗಳ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಪ್ರಾಯೋಜಿತ ಅಲ್ಪಾವಧಿ ಕೋರ್ಸ್ ಆಯೋಜಿಸಿದ್ದು ಸದರಿ ಕಾರ್ಯಕ್ರಮದಲ್ಲಿ ವಿವಿಧ ರಾಜ್ಯಗಳ ಸಹಾಯಕ ಪ್ರಾಧ್ಯಾಪಕರು ಮತ್ತು ಅಧ್ಯಾಪಕರುಗಳು ಭಾಗವಹಿಸಿದ್ದರು.

5. ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರವು 'ವಿಜಯವಾಣಿ' ದಿನಪತ್ರಿಕೆಯಲ್ಲಿ ಪ್ರತಿ ಸೋಮವಾರ 'ರೈತ ಮಿತ್ರ' ಎಂಬ ಅಂಕಣವನ್ನು ಆರಂಭಿಸಿದೆ. ಈ ಅಂಕಣದಲ್ಲಿ ರೈತರು ನಿರಂತರವಾಗಿ ಕೇಳುವ ಪ್ರಶ್ನೆಗಳಿಗೆ / ಸಮಸ್ಯೆಗಳಿಗೆ ಕೇಂದ್ರದ ತಜ್ಞರು ಸೂಕ್ತ ಸಲಹೆಗಳನ್ನು / ಪರಿಹಾರಗಳನ್ನು ನೀಡುತ್ತಾರೆ. ಇದುವರೆಗು 30 ಅಂಕಣಗಳಲ್ಲಿ ಸುಮಾರು 73 ಪ್ರಶ್ನೆಗಳಿಗೆ / ಸಮಸ್ಯೆಗಳಿಗೆ ಸಲಹೆಗಳನ್ನು ನೀಡಲಾಗಿದೆ (ಮಾರ್ಚ್ 31, 2022 ರವರೆಗೆ).

6. ಕೋವಿಡ್–19 ಸಂದರ್ಭದಲ್ಲಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದಲ್ಲಿ 'ಅಗ್ರಿ ವಾರ್' ಘಟಕವನ್ನು ರೈತರ ವಿವಿಧ ಉತ್ಪನ್ನಗಳಿಗೆ ಮಾರುಕಟ್ಟೆ ಅವಕಾಶ ಕಲ್ಪಿಸಲು ಪ್ರಾರಂಭಿಸಿದ್ದು, ಘಟಕ/ಕೆ.ವಿ.ಕೆ.ಗಳು 1472 ತಾಂತ್ರಿಕ ಸಲಹಾ ಸೇವೆಗಳನ್ನು ವಿವಿಧ ವಿಷಯಗಳಾದ ಬೆಳೆ ಉತ್ಪಾದನೆ (355), ಸಸ್ಯ ಸಂರಕ್ಷಣೆ (151), ಬೀಜಗಳ ಲಭ್ಯತೆ (380) ಮತ್ತು ಸಸಿಗಳು (345), ಪಶು ಸಂಗೋಪನೆ (79), ಮಾರುಕಟ್ಟೆ ಸಂಪರ್ಕ ಮತ್ತು ಇತರ ವಿಷಯಗಳ (162) ಕುರಿತು ನೀಡಲಾಯಿತು. ಈ ಸಮಯದಲ್ಲಿ 11,325 ಮೆಟ್ರಿಕ್ ಟನ್ ಹಣ್ಣು ಮತ್ತು 18,828 ಮೆಟ್ರಿಕ್ ಟನ್ ತರಕಾರಿಗಳಿಗೆ ಮಾರುಕಟ್ಟೆ ಸಂಪರ್ಕ ಕಲ್ಪಿಸಲಾಯಿತು. ಇದಲ್ಲದೆ, ವಾಟ್ಸ್‌ಆಪ್ ಮೂಲಕ 545 ಸಮಸ್ಯೆಗಳಿಗೆ ಸಲಹೆಗಳನ್ನು ಹಾಗೂ 933 ಜನರಿಗೆ ಸುಧಾರಿತ ಬೆಳೆ ಪದ್ಧತಿಗಳ ಕೈಪಿಡಿಯನ್ನು ರವಾನಿಸಲಾಗಿದೆ.

given during Krishimela-2021. There were more than 500 exhibition stalls which included agriculture inputs stalls, development department stalls, Start-up Company stalls, food stalls and other companies. About 8 lakhs of farmers and general public visited the Krishimela-2021 in-person and 38.11 lakhs of people participated in the mela virtually.

2. Krishimela 2021 at Zonal Agricultural Research Station, V C Farm, Mandya was organized in both virtual and physical under the theme “Diversified Crop – Farmers Happiness” during December 1st& 2nd 2021 for two days. More than 18000 farmers, students from different districts (Especially Mandya, Mysore, Chamrajanagara, Hassan & Tumkur) participated in the Krishimela

3. One day *Farm Machinery Technology and Demonstration Mela* was organized by the University of Agricultural Sciences, Bangalore on 30-03-2022 at Zonal Agricultural Research Station, V.C. Farm, Mandya under AICRP on Farm Implements and Machinery in collaboration with College of Agriculture and KVK, Mandya, AICRP (PHTE), UAS, Bengaluru and AICRP (EIAA), IIHR, Bengaluru.

4.) Bakery Training Unit, Hebbal, Bangalore organized ICAR sponsored 10 days short course on Advances in Research Methods and Applications in Social Sciences. Assistant professors and above cadre teachers from various states participated in the programme.

5. Agricultural Technology Information Centre has started ‘RAITHA MITHRA’ column being published in Vijayavani Daily Newspaper’ every Monday, in which technical staff of ATIC gives suitable advice for farmers to the frequently asked questions / problems of the week. So far 30 columns have been published and answered for 73 questions / problems (up to March 31, 2022).

6. UAS (B) Agri-War unit started functioning again at ATIC during COVID -19 pandemic situation with a team of scientists from different disciplines. The units/KVKs provided 1472 consultancy services on various aspects viz., technical guidance on crop production (355) and plant protection (151), availability of seeds (380) and planting material (345), animal husbandry (79), market linkages and other aspects (162). The units/KVKs have organised direct sale of fruits (11,325 metric tonnes) and vegetables (18,828 metric tonnes), by the farmers’ to the consumers. Besides this, the unit answered 545 whatsapp queries and sent PDF format of Package of practices to 993 members through whatsapp.

**ಬೋಧನಾ ಸಿಬ್ಬಂದಿಯ ಪ್ರಕಟಣೆಗಳು**

2021–22ನೇ ಸಾಲಿನಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಅಧ್ಯಾಪಕರು 595 ಸಂಶೋಧನಾ ಪ್ರಬಂಧಗಳನ್ನು ಹೆಸರಾಂತ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ನಿಯತಕಾಲಿಕಗಳು, 174 ಜನಪ್ರಿಯ ಲೇಖನಗಳನ್ನು ನಿಯತಕಾಲಿಕಗಳು, 50 ಪುಸ್ತಕಗಳು, 193 ಕರಪತ್ರಗಳು / ಫೋಲ್ಡರ್‌ಗಳು, 245 ಸಂಶೋಧನಾ ಸಾರಾಂಶಗಳು, ಮತ್ತು 16 ಪುಸ್ತಕ ಅಧ್ಯಾಯಗಳು ಮತ್ತು 9 ತರಬೇತಿ ಕೈಪಿಡಿಗಳು, ವಿವಿಧ ನಿಯತಕಾಲಿಕಗಳು / ಸಮ್ಮೇಳನಗಳಲ್ಲಿ ಪ್ರಕಟಿಸಿದ್ದಾರೆ.

## ಹಣಕಾಸು

ಕರ್ನಾಟಕ ಸರ್ಕಾರವು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ 2021–22ನೇ ಸಾಲಿಗೆ ಕೃಷಿ ಸಂಶೋಧನೆ ಅಡಿಯಲ್ಲಿ ರೂ.11544.00 ಲಕ್ಷಗಳನ್ನು, ಸಹಾಯಾನುದಾನ–ವೇತನಕ್ಕಾಗಿ, ರೂ.12161.00 ಲಕ್ಷಗಳನ್ನು, ಸಹಾಯಾನುದಾನ–ವಿಶ್ರಾಂತಿ ವೇತನಕ್ಕಾಗಿ, ರೂ.840.00, ಲಕ್ಷಗಳನ್ನು ಸಹಾಯಾನುದಾನ–ಗುತ್ತಿಗೆ/ಹೊರಗುತ್ತಿಗೆಗಾಗಿ, ರೂ.338.00 ಲಕ್ಷಗಳನ್ನು, ದಿನಗೂಲಿ ನೌಕರರ ವೇತನಕ್ಕಾಗಿ, ರೂ.56.00 ಲಕ್ಷಗಳನ್ನು ಸಂಶೋಧನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಗಾಗಿ, ರೂ.35.00 ಲಕ್ಷಗಳನ್ನು, ಸಂಶೋಧನೆ ಅಡಿಯಲ್ಲಿ ಗಿರಿಜನ ಉಪಯೋಜನೆಗಾಗಿ ರೂ.942.00 ಲಕ್ಷಗಳನ್ನು, ಸಹಾಯಾನುದಾನ–ಕೃಷಿ ಸಂಶೋಧನೆಗಾಗಿ ನಬಾರ್ಡ್‌ಗಾಗಿ ರೂ.350.00 ಲಕ್ಷಗಳನ್ನು, ಒಟ್ಟು ರೂ.26266.00 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಿದೆ.

ಭಾರತ ಸರ್ಕಾರದಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಸಂಶೋಧನಾ ಕಾರ್ಯಕ್ರಮಗಳಿಗೆ ಒಟ್ಟು ರೂ. 64.05 ಕೋಟಿಗಳನ್ನು 148 ಯೋಜನೆಗಳಿಗೆ 2021–22ನೇ ಸಾಲಿಗೆ ಬಿಡುಗಡೆ ಮಾಡಲಾಗಿರುತ್ತದೆ. ಇದರಲ್ಲಿ 32 ಅಖಿಲ ಭಾರತ ಸಂಯೋಜಿತ ಸಂಶೋಧನಾ ಪ್ರಾಯೋಜನೆಗಳು, ಎಂಟು ಕೃಷಿ ವಿಜ್ಞಾನ ಕೇಂದ್ರಗಳು, 50 ತಾತ್ಪೂರ್ತಿಕ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಯೋಜನೆಗಳು, ಎಂಟು ಕೃಷಿ ವಿಶ್ವವಿದ್ಯಾಲಯಗಳ ಅಭಿವೃದ್ಧಿ ಮತ್ತು ಸಬಲೀಕರಣ ಯೋಜನೆಗಳು, ಒಂದು ವಿಶ್ವಬ್ಯಾಂಕ್ ಪ್ರಾಯೋಜಿತ ಯೋಜನೆ ಹಾಗೂ ಭಾರತ ಸರ್ಕಾರದ ವಿವಿಧ ಇಲಾಖೆಗಳಾದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಜೈವಿಕ ತಂತ್ರಜ್ಞಾನ ಇಲಾಖೆ, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್, ಕೃಷಿ ಮತ್ತು ಸಹಕಾರ ಮುಂತಾದ ಇಲಾಖೆಗಳಿಂದ 49 ಯೋಜನೆಗಳು ಒಳಗೊಂಡಿರುತ್ತದೆ. ಕರ್ನಾಟಕ ಸರ್ಕಾರದಿಂದ 6.25 ಕೋಟಿಗಳನ್ನು 19 ಯೋಜನೆಗಳಿಗೆ ಸಂಶೋಧನಾ ಕಾರ್ಯಕ್ರಮಗಳಿಗಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಇದರಲ್ಲಿ ಕರ್ನಾಟಕ ಸರ್ಕಾರದ ತಾತ್ಪೂರ್ತಿಕ 16 ಯೋಜನೆಗಳು ಮತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಮೂರು ಯೋಜನೆಗಳು ಒಳಗೊಂಡಿರುತ್ತದೆ ಹಾಗೂ ಇತರ 13 ಯೋಜನೆಗಳಿಂದ ಒಟ್ಟು 5.12 ಕೋಟಿ ಯೋಜನಾ ಕಾರ್ಯಕ್ರಮಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

**ಸಹಿ ಮಾಡಿದ ಒಪ್ಪಂದದ ದಸ್ತಾವೇಜುಗಳು**

ವಿಶ್ವವಿದ್ಯಾನಿಲಯವು ತಂತ್ರಜ್ಞಾನ ವರ್ಗಾವಣೆ ಸಂಶೋಧನಾ ಚಟುವಟಿಕೆ ಮತ್ತು ಇತರ ಅಭಿವೃದ್ಧಿಪರ ಚಟುವಟಿಕೆಗಳಲ್ಲಿ ವಿಶ್ವವಿದ್ಯಾನಿಲಯವನ್ನು ಸದೃಢಗೊಳಿಸಲು ಪ್ರಸ್ತುತ ಸಾಲಿನಲ್ಲಿ ವಿವಿಧ ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ, ಸರ್ಕಾರಿ, ಖಾಸಗಿ ಮತ್ತು ಸ್ವಯಂಸೇವಾ ಸಂಸ್ಥೆಗಳೊಂದಿಗೆ 4 ಅಂತರರಾಷ್ಟ್ರೀಯ, 19 ರಾಷ್ಟ್ರೀಯ ಮತ್ತು 44 ರಾಜ್ಯ, ಒಟ್ಟು 67 ಒಡಂಬಡಿಕೆಗಳನ್ನು (MoU/ MoA) ಮಾಡಿಕೊಂಡಿದೆ.

## ಗ್ರಂಥಾಲಯ

ಕೃಷಿ ವಿಶ್ವವಿದ್ಯಾನಿಲಯದಎಲ್ಲಾ ಗ್ರಂಥಾಲಯಗಳು, ಕೃಷಿ ವಿಜ್ಞಾನ ಮತ್ತು ತತ್ಸಮಾನ ವಿಷಯಗಳಿಗೆ ಸಂಬಂಧಪಟ್ಟ ಪುಸ್ತಕಗಳು, ನಿಯತಕಾಲಿಕೆಗಳು, ವರದಿಗಳು ಮತ್ತು ಪ್ರಬಂಧಗಳ ಮುದ್ರಿತ ಮತ್ತು ವಿದ್ಯುನ್ಮಾನ ರೂಪದ ಸಂಪನ್ಮೂಲಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿದ್ದು, ಈ ಸಂಪನ್ಮೂಲಗಳನ್ನು ವಿದ್ಯಾರ್ಥಿಗಳಿಗೆ ಹಾಗೂ ಗ್ರಂಥಾಲಯ ಬಳಕೆದಾರರಿಗೆ ಅಂತರ್ಜಾಲ ತಾಣದ ಮೂಲಕ ಪರಾಮರ್ಶಿಸಲು ಅನುವು ಮಾಡಿಕೊಡಲಾಗಿದೆ.

**Publications by the Faculty**

Faculty of UAS-B published 595 Research papers in reputed National and International journals, 174 Popular Articles in Magazines, 50 books, 193 leaflets/folders, 245 Abstracts, 16 Chapters in Books and nine Training Manuals during the year 2021-22.

## FINANCE

During the year 2021-22, the Govt. of Karnataka released a sum of Rs.11544.00 lakhs towards grant-in-aid salary, Rs.12161.00 lakhs towards grant-in-aid pension, Rs.840.00 lakhs towards grant-in-aid Outsource, Rs.338.00 lakhs towards grant-in-aid Daily Wages, Rs.56.00 lakhs under Research Head towards Schedule Caste Sub Plan and Rs.35.00 lakhs under Research Head towards Tribal Sub Plan, Rs.942.00 lakhs towards grant-in-aid General-Research and Rs.350.00 lakhs towards NABARD. Totally Rs.26266.00 lakhs has been released.

Government of India released a sum of Rs. 64.05 crores for the year 2021-22 for 148 Projects/ Schemes, out of which AICRP- 32 Projects, KVK-08 Projects, ICAR Adhoc & Other Funded Proejcts - 50 Projects, ICAR Strengthening projects- 8, GoI (DBT, DST, MNRE&SERB) -49 Projects and ICAR Funded World Bank -1 Project. GoK has released a sum of Rs.6.25 crores for 19 Projects out of which GoK- 16 Projects and RKVY-3 Projects. Other funding agency released a sum of Rs.5.12 crores for 13 Projects.

**MoUs**

In order to facilitate Transfer of Technology, Collaborative Research and Developmental activities, University has signed 67 MoUs/ MoAs (International-4 Nos., National–19 Nos. & State-44 Nos.) with various institutions / organizations.

## LIBRARY

All the Libraries of UAS (B) have a rich collection in the field of Agriculture and allied Sciences which comprises of books, periodicals, bound volumes, reports, e-portal, etc. apart from print resources, e-resources that are being made available through online.

ಗ್ರಂಥಾಲಯದ ಬಳಕೆದಾರರ ಅನುಕೂಲಕ್ಕಾಗಿ ವಿಶ್ವವಿದ್ಯಾನಿಲಯ ಗ್ರಂಥಾಲಯದಲ್ಲಿ ಮೈಲಾಫ್ಟ್, ಡಿಸ್ಪೇಸ್, ಐಆರ್‌ಐಎನ್‌ಎಸ್ ಮತ್ತು ಸೆಂಟೇನ್ವಿಯಾದಂತಹ ಆಧುನಿಕ ತಂತ್ರಜ್ಞಾನಗಳನ್ನು ಖರೀದಿಸಿ, ಅಳವಡಿಸಿ ಅವುಗಳ ಬಳಕೆಗೆ ಅನುವು ಮಾಡಿಕೊಡಲಾಗಿದೆ.

1. **ಸೆಂಟೆನ್ವಿಯಾ ತಂತ್ರಜ್ಞಾನ:** ಸೆಂಟೆನ್ವಿಯಾ ತಂತ್ರಜ್ಞಾನವು ಆಂಗ್ಲ ಭಾಷೆಯ ವ್ಯಾಕರಣ, ಪಠ್ಯ ಮತ್ತು ಶೈಲಿ ವಿಶ್ಲೇಷಣಾ ವೇದಿಕೆಯಾಗಿದ್ದು, ಕಲಿಕೆ ಅಕಾಡೆಮಿಯ ವಿಷಯ ಮತ್ತು ಪ್ರಮಾಣೀಕರಣವನ್ನು ಹೊಂದಿದೆ, ಇದು ಸ್ನಾತಕ, ಸ್ನಾತಕೋತ್ತರ ಮತ್ತು ಪಿಎಚ್.ಡಿ ವಿದ್ಯಾರ್ಥಿಗಳಿಗೆ ಸಹಕಾರಿಯಾಗಿದೆ. ಪ್ರಬಂಧ, ಯೋಜನೆ, ಕಾರ್ಯಯೋಜನೆಗಳನ್ನು ಬರೆಯುವಾಗ, ಬೋಧನೆ ಮತ್ತು ಪ್ರಸ್ತುತಿ ಕೌಶಲ್ಯಗಳ ಮಾಧ್ಯಮವಾಗಿರಲು ಒಗ್ಗಿಕೊಂಡಿರುವುದಕ್ಕೆ ಈ ತಂತ್ರಜ್ಞಾನ ತುಂಬಾ ಪ್ರಯೋಜನಕಾರಿಯಾಗಿದೆ. ಎಲ್ಲಾ ಬಳಕೆದಾರರು ಈ ತಂತ್ರಜ್ಞಾನವನ್ನು ಎಲ್ಲಿಂದಲಾದರೂ ಪರಾಮರ್ಶಿಸಬಹುದು. ಈ ತಂತ್ರಜ್ಞಾನದಲ್ಲಿ ವಿಷಯ ಮೌಲ್ಯಮಾಪನ ಮತ್ತು ಪ್ರಮಾಣೀಕರಣವನ್ನು ಸಹ ಸೇರಿಸಲಾಗಿದೆ.

2. **ಮೈಲಾಫ್ಟ್ ತಂತ್ರಜ್ಞಾನ:** ಮೈಲಾಫ್ಟ್ ತಂತ್ರಜ್ಞಾನ ಸಾಸ್ ಆಧಾರಿತ ತಂತ್ರಜ್ಞಾನವಾಗಿದ್ದು, ಡೇಟಾವನ್ನು ಹಂಚಿಕೊಳ್ಳಲು ವಿಶ್ವವಿದ್ಯಾನಿಲಯಕ್ಕೆ ಒಂದೇ ಐಪಿಯಿಂದ ಎಲ್ಲಾ ಆವರಣಗಳಲ್ಲಿ ಎಲ್ಲಿಯಾದರೂ ಮತ್ತು ಯಾವುದೇ ಸಮಯದಲ್ಲಿ ಇ-ವಿಷಯಗಳನ್ನು ಬಳಕೆದಾರರು ಪರಾಮರ್ಶಿಸಲು ಅವಕಾಶ ನೀಡುತ್ತದೆ. ಈ ತಂತ್ರಜ್ಞಾನದಿಂದ ವಿದ್ಯಾರ್ಥಿ ಸಮುದಾಯಕ್ಕೆ ತುಂಬಾ ಪ್ರಯೋಜನವಾಗಲಿದೆ.

3. **ಡಿ ಸ್ಪೇಸ್(DSpace):** ಡಿ ಸ್ಪೇಸ್ ಓಪನ್ ಸೋರ್ಸ್ ರೆಪೋಸಿಟರಿ  ಅಪ್ಲಿಕೇಶನ್ (ಸಾಂಸ್ಥಿಕ ಭಂಡಾರ) ಆಗಿದ್ದು ಅದು ಪಠ್ಯ, ವಿಡಿಯೋ, ಆಡಿಯೋ ಮತ್ತು ಡೇಟಾ ಸೇರಿದಂತೆ ವಿದ್ಯುನ್ಮಾನ ವಸ್ತುಗಳನ್ನು ಸೆರೆಹಿಡಿಯಲು, ಸಂಗ್ರಹಿಸಲು, ಸೂಚ್ಯಂಕ ಮಾಡಲು, ಸಂರಕ್ಷಿಸಲು ಮತ್ತು ವಿತರಿಸಲು ಗ್ರಂಥಾಲಯವನ್ನು ಅನುಮತಿಸುತ್ತದೆ.

4. **ಐ.ಆರ್.ಐ.ಎನ್.ಎಸ್:** ಭಾರತೀಯ ಸಂಶೋಧನಾ ಮಾಹಿತಿ ನೆಟ್‌ವರ್ಕ್ ವ್ಯವಸ್ಥೆ ಎನ್ನುವುದು ವೆಬ್ ಆಧಾರಿತ ಸಂಶೋಧನಾ ಮಾಹಿತಿ ನಿರ್ವಹಣೆ ಸೇವೆಯಾಗಿದ್ದು, ಮಾಹಿತಿ ಮತ್ತು ಗ್ರಂಥಾಲಯ ನೆಟ್‌ವರ್ಕ್ ಕೇಂದ್ರವು ಅಭಿವೃದ್ಧಿಪಡಿಸಿದೆ. ಪೋರ್ಟಲ್ ಶೈಕ್ಷಣಿಕ ಅನುಕೂಲ, ಆರ್ ಅಂಡ್ ಡಿ ಸಂಸ್ಥೆಗಳು, ಅಧ್ಯಾಪಕ ಸದಸ್ಯರು, ವಿಜ್ಞಾನಿಗಳು ವಿದ್ವತ್ಪೂರ್ಣ ಸಂವಹನ ಚಟುವಟಿಕೆಗಳನ್ನು ಸಂಗ್ರಹಿಸಲು ಮತ್ತು ಪ್ರದರ್ಶಿಸಲು ವಿದ್ವತ್ಪೂರ್ಣ ಜಾಲವನ್ನು ರಚಿಸಲು ಅವಕಾಶವನ್ನು ಒದಗಿಸುತ್ತದೆ.

5. ಇದಲ್ಲದೆ, ವಿಶ್ವವಿದ್ಯಾನಿಲಯ ಗ್ರಂಥಾಲಯ ಸೇವೆಗಳ ಬಗ್ಗೆ ಅರಿವು ಮೂಡಿಸಲು ಗ್ರಂಥಾಲಯ ಸಿಬ್ಬಂದಿ ಕೈಪಿಡಿ, ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಗ್ರಂಥಾಲಯ ಬಳಕೆದಾರರಿಗಾಗಿ ಗ್ರಂಥಾಲಯ ಹ್ಯಾಂಡ್‌ಬುಕ್, ಕರಪತ್ರ, ಮತ್ತು ಪೋಸ್ಟರ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ.

6. ವಿಶ್ವವಿದ್ಯಾನಿಲಯ ಗ್ರಂಥಾಲಯವು 2021–22ನೇ ಸಾಲಿನಲ್ಲಿ ಕೌಶಲ್ಯ ಅಭಿವೃದ್ಧಿ ಕೇಂದ್ರ ಯೋಜನೆಯಡಿಯಲ್ಲಿ ಒಟ್ಟು 1275 ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಿದೆ, ಇದರ ವೆಚ್ಚ ರೂ. 13,00,000/–ಗಳು ಮತ್ತು ಒಟ್ಟು 13 ಇ–ಪುಸ್ತಕಗಳನ್ನು ಹಾಗೂ 293 ಮುದ್ರಣ ಪುಸ್ತಕಗಳನ್ನು ರಾಜ್ಯ ಸರ್ಕಾರದ ಅನುದಾನದಲ್ಲಿ ಖರೀದಿಸಲಾಗಿದೆ.

7. ವಿಶ್ವವಿದ್ಯಾನಿಲಯ ಗ್ರಂಥಾಲಯವು ಸಾಮಾಜಿಕ ಮಾಧ್ಯಮ ಲಿಂಕ್‌ಗಳನ್ನು ರಚಿಸಿದೆ: ಯುಟ್ಯೂಬ್, ಬ್ಲಾಗ್ ಮತ್ತು ಫೇಸ್‌ಬುಕ್ ಬಳಕೆದಾರರ ಅನುಕೂಲಕ್ಕಾಗಿ ಮತ್ತು ಪತ್ರಿಕೆಗಳ ತುಣುಕುಗಳು ಹಾಗೂ ವಿಷಯ ನಿರ್ವಹಣೆ ಸೇವೆಯನ್ನು ಸಹ ಒದಗಿಸುತ್ತಿದೆ.

8. ನಿಪಾ : ICAR, SRF, JRF ಮತ್ತು NET ಪರೀಕ್ಷೆಗಳಿಗೆ ಅಭ್ಯಾಸ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಈ ಡೇಟಾಬೇಸ್ ತುಂಬಾ ಉಪಯುಕ್ತವಾಗಿದೆ ಮತ್ತು ಈ ತಂತ್ರಾಂಶದಲ್ಲಿ ಅಂತರ್ಜಾಲ ತಾಣ ಪರೀಕ್ಷೆಗಳನ್ನು ಸಹ ನಡೆಸಬಹುದು.

9. ಕೃಷಿಕೋಶ: ಕೃಷಿಕೋಶವು ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳ ಸಾಂಸ್ಥಿಕ ಜ್ಞಾನದ ಭಂಡಾರವಾಗಿದ್ದು, ಸಾಂಸ್ಥಿಕ ಪ್ರಕಟಣೆಗಳು, ತಾಂತ್ರಿಕ ಬುಲೆಟಿನ್‌ಗಳು, ಯೋಜನಾ ವರದಿಗಳು, ಪ್ರಬಂಧಗಳು ಮತ್ತು ವಿವಿಧ ದಾಖಲೆಗಳು ಇತ್ಯಾದಿಗಳ ಸಂಗ್ರಹವನ್ನು ಹೊಂದಿದೆ. ಇದು ವಿವಿಧ ಸಂಶೋಧನಾ ಸಂಸ್ಥೆಗಳು ಮತ್ತುರಾಜ್ಯದ ವಿವಿಧ ಕೃಷಿ ವಿಶ್ವವಿದ್ಯಾನಿಲಯ

**Latest Technology installed in Library**

1. **Sententia Software:** Sententia software is an English grammar text and style analysis platform with content and certification for learning academy which is adaptive for the UG, PG and Ph.D students, besides staff members.

2. **Myloft Software:** Myloft is a SaaS based product which allows the users to access the e-content anywhere and anytime on single IP range for the entire University Jurisdiction of UASB for sharing the data of staff, students of UG/PG and Ph.D.

3. **DSpace :**DSpace is an open source repository which is used for preserves and enables easy and open access to all types of digital content including text, images, moving images mpegs and data set.

4. **IRINS (Vidhwan) service:** The advantages of IRINS service is it showcase the research productivity of research scholars, scientists and faculty. It helps to know the H-index of individual faculty, Department wise and overview of Institute research output.

5. Library has developed staff manual, Library Hand book for PG students and Library users besides, leaflet and poster to create awareness about University Library services.

6. During the year 2021-22 University Library procured a total number of 1275 Competitive books under Skill Development Centre Scheme, which costed Rs. 13,00,000/- and a total number of 13 e-books and 293 print books were also purchased under state and ICAR budget.

7. University Library has created social media link like: Youtube, blog and facebook for the benefit of the users and also provides newspapers clippings and content management service.

8. NIPA; This database NIPA is very much useful for the students who are appearing for ICAR, SRF, JRF and NET exams and online test can also be conducted in this software.

9. Krishikosh: Krishikosh is an institutional repository of knowledge in Agriculture and Allied Sciences, having collection of Institutional Publications, Technical Bulletins, Project Reports,

ಗ್ರಂಥಾಲಯಗಳಲ್ಲಿ ದೇಶದಾದ್ಯಂತ ವ್ಯಾಪಕವಾಗಿ ಹರಡಿದೆ. ಇದು ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ತುಂಬಾ ಉಪಯುಕ್ತವಾಗಿದೆ. ಇಲ್ಲಿಯವರೆಗೆ ಒಟ್ಟು 13269 ಪ್ರಬಂಧಗಳನ್ನು ಕೃಷಿಕೋಶಕ್ಕೆ ಅಪಲೋಡ್ ಮಾಡಲಾಗಿದೆ.

10. ವೀಡಿಯೋ ಕಾನ್ಫರೆನ್ಸ್ ಸೌಲಭ್ಯ: ವಿಶ್ವವಿದ್ಯಾನಿಲಯ ಗ್ರಂಥಾಲಯದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಅಧೀನ ಕಾಲೇಜುಗಳು ಸೇರಿದಂತೆ ಆನ್‌ಲೈನ್ ಮೀಟಿಂಗ್ ಸೆಮಿನಾರ್‌ಗಳು, ವಿದ್ಯಾರ್ಥಿಗಳಿಗೆ ತರಗತಿಗಳು ಇತ್ಯಾದಿಗಳನ್ನು ನಡೆಸುವ ಅನುಕೂಲಕ್ಕಾಗಿ ವಿಶ್ವವಿದ್ಯಾನಿಲಯ ಗ್ರಂಥಾಲಯದಲ್ಲಿ ವೀಡಿಯೋಕಾನ್ಫರೆನ್ಸ್ ಸೌಲಭ್ಯವನ್ನು ಅಳವಡಿಸಲಾಗಿದೆ.

11. ವಿಶ್ವವಿದ್ಯಾನಿಲಯ ಗ್ರಂಥಾಲಯವು 17 ಮತ್ತು 18ನೇ ಮಾರ್ಚ್ 2022ರಂದು ವಿಶ್ವವಿದ್ಯಾನಿಲಯದ ಉತ್ತರ ಸಭಾಂಗಣದ ಕಾರಿಡಾರ್‌ನಲ್ಲಿ ಪುಸ್ತಕ ಪ್ರದರ್ಶನವನ್ನು ಆಯೋಜಿಸಿತ್ತು. ಈ ಪ್ರದರ್ಶನ ಕಾರ್ಯಕ್ರಮದಲ್ಲಿ ಒಟ್ಟು 29 ಪೂರೈಕೆದಾರರು/ ಡೀಲರ್‌ಗಳು / ಮಾರಾಟಗಾರರು ಭಾಗವಹಿಸಿದ್ದರು. ಪುಸ್ತಕ ಪ್ರದರ್ಶನದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಇತರ ಸಿಬ್ಬಂದಿ ಭಾಗವಹಿಸಿದ್ದರು.

**ಮೂಲ ಭೂತ ಸೌಕರ್ಯಗಳು**

**ರಾಜ್ಯ ಸರ್ಕಾರದ ಅನುದಾನ**

1) ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೌಶಲ್ಯಾಭಿವೃದ್ಧಿ ಕೇಂದ್ರವನ್ನು ನಿರ್ಮಾಣ ಮಾಡುವ ಕಾರ್ಯ, ವಿದ್ಯಾರ್ಥಿನಿಯರ ವಸತಿ ನಿಲಯವನ್ನು ನಿರ್ಮಾಣ, ಬೇಕರಿ ತರಬೇತಿ ಘಟಕ ನಿರ್ಮಾಣ, ಈಜು ಕೊಳ ನಿರ್ಮಾಣ, ಕಬಡ್ಡಿ ಅಂಕಣಕ್ಕೆ ಛಾವಣಿ ನಿರ್ಮಾಣ ಮಾಡುವ ಕೆಲಸ, ಕೃಷಿ ಕಾಲೇಜು (ಉತ್ತರ ಬ್ಲಾಕ್) ರಲ್ಲಿ 9ನೇ ಬ್ಲಾಕ್ (ಎರಡನೇ ಮಹಡಿ) ನಿರ್ಮಾಣ ಮಾಡುವ ಕೆಲಸ, ಸ್ನಾತಕೋತರ ವಿದ್ಯಾರ್ಥಿ (1ನೇ ಬ್ಲಾಕ್) ನಿಲಯಕ್ಕೆ ಬಣ್ಣ ಬಳೆಯುವುದು ಮತ್ತು ಇಂಟಿಗ್ರಲ್ ಜಲ ನಿರೋದಕವನ್ನು ಒದಗಿಸುವ ಕೆಲಸ ಮತ್ತು ಕೃಷಿ ಮಾರುಕಟ್ಟೆ, ಸಹಕಾರ ಮತ್ತು ವ್ಯವಹಾರ ನಿರ್ವಹಣೆ (ಹೊಸ) ಕಟ್ಟಡಕ್ಕೆ ಪ್ರಯಾಣಿಕರ ಲಿಫ್ಟ್‌ನ ಪೂರೈಕೆ ಕಾರ್ಯಗಳನ್ನು ಕೈಗೊಂಡಿದ್ದು, ಕಾಮಗಾರಿ ಕೆಲಸವು ಪ್ರಗತಿಯಲ್ಲಿರುತ್ತದೆ.

2) ಕೃಷಿ ವಿಶ್ವವಿದ್ಯಾನಿಲಯದ ಚಿಂತಾಮಣಿ ರೇಷ್ಮೆ ಕೃಷಿ ಕಾಲೇಜಿನಲ್ಲಿರುವ ಸಭಾಂಗಣಕ್ಕೆ ಆಸನ ವ್ಯವಸ್ಥೆಗಾಗಿ ಪೀಠೋಪಕರಣಗಳೊಂದಿಗೆ ವಿನೈಲ್/ಕಾರ್ಪೆಟ್ ನೆಲಹಾಸನ್ನು ಒದಗಿಸುವ ಕೆಲಸ & ಗ್ರೀನ್‌ರೂಮ್ ನಿರ್ಮಾಣ ಕೈಗೊಂಡಿದ್ದು, ಕಾಮಗಾರಿ ಕೆಲಸವು ಪ್ರಗತಿಯಲ್ಲಿರುತ್ತದೆ.

3) ಕೃಷಿ ವಿಶ್ವವಿದ್ಯಾನಿಲಯದ ಮಂಡ್ಯ ಕೃಷಿ ಕಾಲೇಜಿನಲ್ಲಿರುವ ಪರೀಕ್ಷಾ ಕೊಠಡಿ ಮೇಲೆ ಮೆಟ್ಟಿಲು ಮತ್ತು ಲಿಫ್ಟ್‌ನೊಂದಿಗೆ ಎರಡನೇ ಮಹಡಿ ನಿರ್ಮಾಣ ಮಾಡುವ ಕೆಲಸವನ್ನು ಕೈಗೊಂಡಿದ್ದು, ಕಾಮಗಾರಿ ಕೆಲಸವು ಪ್ರಗತಿಯಲ್ಲಿರುತ್ತದೆ.

4) ಕೃಷಿ ವಿಶ್ವವಿದ್ಯಾನಿಲಯದ ಮಂಡ್ಯ ಕೃಷಿ ಕಾಲೇಜಿನಲ್ಲಿರುವ ಸಭಾಂಗಣಕ್ಕೆ ಆಸನ ವ್ಯವಸ್ಥೆಗಾಗಿ ಪೀಠೋಪಕರಣಗಳೊಂದಿಗೆ ವಿನೈಲ್ / ಕಾರ್ಪೆಟ್ ನೆಲಹಾಸನ್ನು ಒದಗಿಸುವ ಕೆಲಸವನ್ನು & ಕೃಷಿ ಕಾಲೇಜಿಗೆ ಪ್ರವೇಶಕಮಾನು ನಿರ್ಮಾಣ ಮಾಡುವ ಕೆಲಸವನ್ನು ಕೈಗೊಂಡಿದ್ದು, ಕಾಮಗಾರಿ ಕೆಲಸವು ಪ್ರಗತಿಯಲ್ಲಿರುತ್ತದೆ.

5) ಕೃಷಿ ವಿಶ್ವವಿದ್ಯಾನಿಲಯದ ಚಾಮರಾಜನಗರ ಕೃಷಿ ಕಾಲೇಜಿನಲ್ಲಿ ಡೀನ್ ವಸತಿ ನಿಲಯವ, ಬಿ–ಟೈಪ್ (2 ಸಂಖ್ಯೆ) & ಸಿ–ಟೈಪ್ (4 ಸಂಖ್ಯೆ) ನಿರ್ಮಾಣ ಮಾಡುವ ಕೆಲಸವನ್ನು ಕೈಗೊಂಡಿದ್ದು, ಕಾಮಗಾರಿ ಕೆಲಸವು ಪ್ರಗತಿಯಲ್ಲಿರುತ್ತದೆ.

**ಭಾರತ ಸರ್ಕಾರದ ಅನುದಾನ**

1) ಕೃಷಿ ವಿಶ್ವವಿದ್ಯಾನಿಲಯದ ಹಾಸನ ಕೃಷಿ ಕಾಲೇಜಿನಲ್ಲಿಆಹಾರ ಸಂಸ್ಕರಣಾಘಟಕವನ್ನು ನಿರ್ಮಾಣ ಮಾಡುವ ಕೆಲಸವನ್ನು ಕೈಗೊಂಡಿದ್ದು, ಕಾಮಗಾರಿ ಕೆಲಸವು ಪ್ರಗತಿಯಲ್ಲಿರುತ್ತದೆ.

Thesis and various documents etc. A total number of 13269 Thesis CD'S are uploaded to "Krishikosh" till date.

10. Video Conference facility: Video conference facility has been installed successfully at UAS library, GKVK for the benefit of conducting online meeting seminars, classes for students etc., including Constituent colleges of UAS-B.

11. University Library organized Book Exhibition on 17th and 18th March 2022. A total number of 29 Suppliers/Dealers/Vendors had participated in the exhibition.

**Infrastructure**

**Under State Grants**

1) Construction of Skill Development Centre, Girls Hostel , Bakery Training Unit, Kabaddi court roof structure, Construction of 9th Block (2nd Floor at Agri. College), Painting & integral water proofing at 1st Block of PG Boys Hostel, Supply, installation, testing and commissioning of passenger lift at Agricultural Marketing Building at GKVK campus have been taken up for execution and works are under progress.

2) Providing vinyl / carpet flooring with furniture for seating arrangements and Audio system and Construction of Green Room to Auditorium at Sericulture College, Chintamani is taken up for execution and work is under progress.

3) Construction of Second Floor over Examination Hall with stair case & lift at Agri. College, Mandya is taken up for execution and work is under progress.

4) Providing vinyl / carpet flooring with furniture for seating arrangements & Audio system and Construction of Green Room for Auditorium; Construction of Entrance Arch at Agri. College, Mandya have been taken up for execution and work is under progress.

5) Construction of Dean Quarters, B-Type Quarters (2 Nos) and C-Type Quarters at Agri. College, Chamarajanagara have been taken up for execution and work is under progress.

**Under Govt. of India Grants**

1) Construction of Food Processing Unit at Agri. College, Hassan is taken up for execution and work is under progress.

2) ಮಾಗಡಿ ಕೃಷಿ ವಿಜ್ಞಾನಕೇಂದ್ರದಲ್ಲಿರುವ ಹಳೆಯ ಬೀಜ ಸಂಸ್ಕರಣಾಘಟಕವನ್ನುತೆಂಗಿನಕಾಯಿ ಸಂಸ್ಕರಣೆಗಾಗಿ ತೆಂಗಿನ ಕಾವು ಸೌಲಭ್ಯವಾಗಿ ನವೀಕರಣ ಮಾಡುವ ಕೆಲಸವನ್ನು ಕೈಗೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

3) ಕುಣಿಗಲ್ ಕೃಷಿ ಸಂಶೋಧನಾಕೇಂದ್ರದ ಮುಖ್ಯ ಪ್ರವೇಶದ್ವಾರದಿಂದ ಸಿಬ್ಬಂದಿ ವಸತಿ ಗೃಹಗಳ ವರೆಗಿನ ಮಾರ್ಗದ ರಸ್ತೆಗೆ ಥಾಂಬರೀಕರಣವನ್ನು ಒದಗಿಸುವ ಕೆಲಸವನ್ನು ಕೈಗೊಂಡಿದ್ದು, ಕಾಮಗಾರಿಯು ಪೂರ್ಣಗೊಂಡಿರುತ್ತದೆ.

4) ಕುಣಿಗಲ್ ಕೃಷಿ ಸಂಶೋಧನಾಕೇಂದ್ರದಲ್ಲಿರುವ ಮೇವಿನ ಗುಣಮಟ್ಟ ವಿಶ್ಲೇಷಣೆ ಮಾಡುವ ಪ್ರಯೋಗಲಾಯದ ಮೇಲೆ ಮೊದಲನೇ ಮಹಡಿ ಮತ್ತು ಎರಡನೇ ಮಹಡಿ ನಿರ್ಮಾಣ ಮಾಡುವಕೆಲಸವನ್ನು ಕೈಗೊಂಡಿದ್ದು, ಕಾಮಗಾರಿಯು ಪೂರ್ಣಗೊಂಡಿರುತ್ತದೆ.

**ಐ.ಸಿ.ಎ.ಆರ್. ಅನುದಾನ**

2021–22ನೇ ಸಾಲಿನ ಐ.ಸಿ.ಎ.ಆರ್. ವತಿಯಿಂದ ಮೊದಲನೇ ಕಂತಿನ ಹಣವಾಗಿ ರೂ.30.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಗಾಂಧಿ ಕೃಷಿ ವಿಜ್ಞಾನ ಕೇಂದ್ರ; ಮಂಡ್ಯ; ಹಾಸನ ಕೃಷಿ ಕಾಲೇಜುಗಳಿಗೆ ತಲಾ ರೂ. 10.00 ಲಕ್ಷ ಸ್ಮಾರ್ಟ್ ಕ್ಲಾಸ್ ರೂಮ್‌ಗಳನ್ನ ನವೀಕರಿಸಲಾಗುತ್ತಿದೆ ಮತ್ತು ಕೆಲಸಗಳು ಪ್ರಗತಿಯಲ್ಲಿವೆ.

## ಗುರಿ – 2030

ಅ) ಶೈಕ್ಷಣಿಕ, ಸಂಶೋಧನೆ ಮತ್ತು ಫಲಿತಗಳನ್ನು ತಲುಪಿಸುವ ವಿಧಾನಗಳಲ್ಲಿ ಕೃಷಿ ಕ್ಷೇತ್ರವು ಮಹತ್ತರ ಬದಲಾವಣೆಗಳನ್ನು ಬಯಸುತ್ತದೆ. ಜಾಗತಿಕವಾಗಿ ಸ್ಪರ್ಧಾತ್ಮಕವಾಗಿರಬಲ್ಲ ಹೊಸರೂಪದ ಕೃಷಿ ವಿಜ್ಞಾನಿಗಳನ್ನು ಅಭಿವೃದ್ಧಿಪಡಿಸಲುಆಧುನಿಕ ವಿಜ್ಞಾನಗಳನ್ನೊಳಗೊಂಡಂತೆ ಉತ್ತಮಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಕೃಷಿ ಶಿಕ್ಷಣವನ್ನು ಆ ದಿಕ್ಕಿನೆಡೆಗೆ ಕೊಂಡೊಯ್ಯುವುದು ಭವಿಷ್ಯದ ಗುರಿಯಾಗಿದೆ. ಬೋಧನೆ–ಕಲಿಕೆ ಪ್ರಕ್ರಿಯೆಯನ್ನು ಆಧುನಿಕ, ನವೀನ, ಪ್ರಾಯೋಗಿಕ ಕೌಶಲ್ಯಾಧಾರಿತ ವಿಧಾನಗಳ ಮೂಲಕ ನಡೆಸಲಾಗುವುದು. ಪಠ್ಯಕ್ರಮವು ಜಾಗತಿಕವಾಗಿ ಹಾಗೂ ಸ್ಥಳೀಯವಾಗಿ ಸೂಕ್ತವಿರುವಂತೆ ಮಾಡಲಾಗುವುದು.

ಆ) ವಿಶ್ವವಿದ್ಯಾನಿಲಯವು "ನಿರ್ದಿಷ್ಟವಾಗಿ ಕೃಷಿ ಮತ್ತು ಸಂಬಂಧಿತ ವಿಜ್ಞಾನ ಕ್ಷೇತ್ರಗಳಲ್ಲಿ ಕಲಿಕೆ ಮತ್ತು ಸಂಶೋಧನೆ ಪ್ರಗತಿಯನ್ನು ಹೆಚ್ಚಿಸಲು ಶಾಸನಬದ್ಧ ಜವಾಬ್ದಾರಿ"ಯನ್ನು ಹೊಂದಿದೆ. ಕೃಷಿ ಹವಾಮಾನ ವಲಯಗಳಲ್ಲಿ ಒಳಗೊಳ್ಳುವಿಕೆಯ ಬೆಳವಣಿಗೆ ಸಾಧಿಸಲು ಸಂಶೋಧನೆ ಮತ್ತು ಅಭಿವೃದ್ಧಿಯ ಸಾಂಸ್ಥಿಕ ಚೌಕಟ್ಟಿನಲ್ಲಿ ಹಾಗೂ ಕಾರ್ಯವೈಖರಿಯಲ್ಲಿ ರಾಚನಿಕ ಬದಲಾವಣೆಗಳನ್ನು ತರಲು ಸಂಶೋಧನೆ ಮತ್ತು ಅಭಿವೃದ್ಧಿಯನ್ನು ತೀವ್ರಗೊಳಿಸುವ ಅವಶ್ಯಕತೆಯನ್ನು ವಿಶ್ವವಿದ್ಯಾನಿಲಯವು ಕಂಡುಕೊಂಡಿದೆ. ಈ ದೃಷ್ಟಿಯಲ್ಲಿ ವಿಶ್ವವಿದ್ಯಾನಿಲಯವು ಸಾರ್ವಜನಿಕ–ಖಾಸಗಿ ಭಾಗವಹಿಸುವಿಕೆ ಮಾದರಿಯ ಸಂಶೋಧನಾ ವಿಧಾನಕ್ಕೆ ಒತ್ತು ನೀಡಿ ಒಕ್ಕೂಟ ಸಂಶೋಧನಾ ವಿಧಾನವನ್ನು ಉತ್ತೇಜಿಸುತ್ತದೆ.

ಇ) ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳನ್ನು ತಲುಪದವರಿಗೆ ತಲುಪಿಸಿ ಅದರ ಲಾಭ ಸಾರ್ಥಕವಾಗುವಂತೆ ಮಾಡುವುದಕ್ಕೆ ವಿಶ್ವವಿದ್ಯಾನಿಲಯವು ಆದ್ಯತೆ ನೀಡುತ್ತದೆ. ಈ ದೃಷ್ಟಿಯಲ್ಲಿ ಸಮಗ್ರ ಸಮುದಾಯ ಅಭಿವೃದ್ಧಿಗೆ ಸಂಪನ್ಮೂಲ ಕೇಂದ್ರೀಕರಣ ನಿಗದಿಪಡಿಸಿದ ಗುರಿಯಾಗಿದೆ.

## ಮುಂದಿನ ಹಾದಿ

ಸುಸ್ಥಿರ ಅಭಿವೃದ್ಧಿಯ ಗುರಿಯನ್ನು ನಿಗದಿಗೊಳಿಸಿರುವುದರಿಂದ ನಮ್ಮ ಕಾರ್ಯಕ್ರಮಗಳು ಆಹಾರ ಮತ್ತು ಪೌಷ್ಟಿಕತೆಯ ಭದ್ರತೆಯನ್ನು ಸಾಧಿಸುವ ಯೋಜನೆಗಳನ್ನು ಹಾಕಿಕೊಳ್ಳಬೇಕಿದೆ. ಅತ್ಯಾಧುನಿಕ ತಂತ್ರಜ್ಞಾನಗಳ, ಅಂತರಶಿಸ್ತೀಯ ವಿಧಾನಗಳ ಮತ್ತು ಮಾನವ ಸಂಪನ್ಮೂಲಗಳ ಮೇಲೆ ಲಭ್ಯವಿರುವ ಜ್ಞಾನದೊಂದಿಗೆ ಆಹಾರ ಭದ್ರತೆಯನ್ನು ಸಾಧಿಸುವತ್ತ ಉತ್ಪಾದನೆಯನ್ನು

2) Renovation of old Seed Processing Unit into Coconut Incubation Facility for Processing of Coconut at ICAR, KVK, Magadi is taken up for execution and work is under progress.

3) Providing asphalting to the approach road from main entrance gate to Staff quarters at ARS, Kunigal is taken up for execution and work is completed.

4) Construction of First Floor & Second Floor to Fodder Quality Analysis Laboratory at ARS, Kunigal is taken up for execution and work is under progress.

**Under ICAR Grants**

1) ICAR had allocated Rs. 30.00 lakh during the year 2021-22 under 1stInstallment, Rs. 10.00 lakh each is used for refurbishing of Smart Class Rooms at GKVK, College of Agriculture, Mandya, College of Agriculture, Hassan and the works are at various stages of progress.

## VISION – 2030

a) The agriculture sector warrants for paradigm shift in academics, research and outreach approaches. Future thrust would be on streamlining agricultural education to impart quality education and to encompass frontier sciences to develop new band of agricultural scientists who are globally competitive. The teaching-learning process will be touched with modern innovative practical skill based methods. Curricula will be made globally competitive and locally relevant.

b) The university has statutory responsibility for furthering the advancement of learning and research, particularly in agriculture and other allied sciences. The University recognizes the need for intensification of research and develop road map and bring in structural change in the Research & Development institutional frame work and functions in respect of Agro-climatic Zones with new mechanisms to achieve inclusive growth. In this endeavor, the university promotes consortia mode of research with emphasis on PPP mode.

c) Priority shall be to enhance the University to reach the unreached and harness the benefits of new technologies. In this regard Component Convergence for Comprehensive Community development shall be the set agenda.

## WAY FORWARD

The goal being set towards sustainable development, our programmes must be planned to achieve food and nutritional security. With the available knowledge, on cutting edge technologies, interdisciplinary approaches and human resources, it must be possible to enhance the production to

ಹೆಚ್ಚಿಸಲು ಸಾಧ್ಯವಿದೆ. ನಮ್ಮ ಸಂಶೋದನೆ ಮತ್ತು ಅಭಿವೃದ್ಧಿ ಚಟುವಟಿಕೆಗಳು ಕೇವಲ ಆಹಾರ ಭದ್ರತೆಯನ್ನಷ್ಟೆ ನೀಡದೆ ಪೌಷ್ಟಿಕಾಂಶಗಳ ಭದ್ರತೆಯನ್ನು ಸಹ ಒದಗಿಸಬೇಕಾಗಿದೆ. ಇದರ ಜೊತೆಗೆ ಉತ್ಪಾದನೆಯನ್ನು ಹೆಚ್ಚಿಸಲು ಕೊಯ್ಲೋತ್ತರ ನಷ್ಟಗಳನ್ನು ಕಡಿಮೆಗೊಳಿಸುವದಕ್ಕಾಗಿ ನಿರ್ವಹಣಾ ವ್ಯವಸ್ಥೆಯ ಅವಶ್ಯಕತೆಯೂ ಇದೆ. ಉತ್ಪಾದಕ, ಮಾರುಕಟ್ಟೆ ಮತ್ತು ಬಳಕೆದಾರರ ನಡುವಿನ ಜಾಲಬಂಧವನ್ನು ಅಭಿವೃದ್ಧಿಗೊಳಿಸುವುದು ಇನ್ನೊಂದು ಸವಾಲಾಗಿಯೇ ಇದೆ. ಈ ವ್ಯವಸ್ಥೆಯ ಸುಧಾರಣೆಯು ತಲುಪಲಾಗದವರಿಗೆ ಅನುಕೂಲವಾಗಲಿದೆ. ಗ್ರಾಮೀಣ ಸಮುದಾಯದ, ರಾಷ್ಟ್ರದ ಮತ್ತು ಜಗತ್ತಿನ ಒಳಿತಿಗಾಗಿ ಆಹಾರ ಉತ್ಪಾದನೆಯನ್ನು ಹೆಚ್ಚಿಸುವುದರೆಡೆಗೆ ಚಿಂತನಾಶೀಲರನ್ನಾಗಿಸುವ ನಿಟ್ಟಿನಲ್ಲಿ ನಮ್ಮ ವಿದ್ಯಾರ್ಥಿಗಳನ್ನು ಅಣಿಗೊಳಿಸುವ ಮತ್ತು ಸಮರ್ಥಗೊಳಿಸುವ ಗುರುತರ ಜವಾಬ್ದಾರಿಯು ನಮ್ಮ ವಿಶ್ವವಿದ್ಯಾಲಯದ ಮೇಲಿದೆ. ನಿಖರವಾಗಿ ಹೇಳುವುದಾದರೆ ಕಲಿ, ದುಡಿ ಮತ್ತು ಹಿಂದಿರುಗಿಸು. ಮುಂಬರಿದ ತಂತ್ರಜ್ಞಾನಗಳನ್ನು ಆವಿಷ್ಕಾರ ಮಾಡಿ ವೈಜ್ಞಾನಿಕ ಬೋಧಕ ಸಿಬ್ಬಂದಿಯ ಜ್ಞಾನ ಅಡಿಪಾಯವನ್ನು ಸದೃಢಗೊಳಿಸಬೇಕಾಗಿದೆ. ಕೃಷಿ ಉತ್ಪಾದನಾ ವ್ಯವಸ್ಥೆಯಲ್ಲಿ ಮಾದರಿ ಬದಲಾವಣೆಯನ್ನು ತರಲು ನಿರ್ವಹಣೆ ಮತ್ತು ಮೇಲ್ವಿಚಾರಣೆಯಲ್ಲಿ ಉತ್ತಮ ಆಡಳಿತವನ್ನು ಕಲ್ಪಿಸುವುದಕ್ಕಾಗಿ ಸಶಕ್ತ ಹಣಕಾಸು ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ವಿಶ್ವವಿದ್ಯಾಲಯವು ಶ್ರಮಿಸುತ್ತಿದೆ. ನೂತನ ಶಿಕ್ಷಣ ನೀತಿ– 2020 ಇದರ ಅನುಷ್ಠಾನವು ಕೂಡ ವಿಶ್ವವಿದ್ಯಾನಿಲಯಕ್ಕೆ ಸವಾಲಿನ ಪ್ರಕ್ರಿಯೆಯಾಗಿರುತ್ತದೆ.

**ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಭವಿಷ್ಯದ ಗುರಿ**

1) ವಿದ್ಯಾರ್ಥಿಗಳಲ್ಲಿ ಕೌಶಲ್ಯತೆಯನ್ನು ಮತ್ತಷ್ಟು ಸದೃಢಗೊಳಿಸಲು ನೂತನ ಶಿಕ್ಷಣ ನೀತಿ–2020 ಅಳವಡಿಸಿಕೊಳ್ಳುವುದು.

2) ಸ್ನಾತಕೋತ್ತರ ಶೈಕ್ಷಣಿಕ ಚಟುವಟಿಕೆಗಳನ್ನು ಯಾಂತ್ರಿಕ ಸ್ವಯಂಚಾಲಿತಗೊಳಿಸುವುದು.

3) ತುರ್ತು ಸಂದರ್ಭಗಳಲ್ಲಿ ವರ್ಚ್ಯುವಲ್/ಆನ್‌ಲೈನ್ ಶಿಕ್ಷಣವನ್ನು ಅನುಸರಿಸುವುದು.

4) ಸ್ನಾತಕ ಪಠ್ಯಕ್ರಮದಲ್ಲಿ ಎನ್.ಸಿ.ಸಿ. ಮರು ಪರಿಚಯಿಸುವುದು.

5) ಮಾಹಿತಿ, ಸಂವಹನೆ ಮತ್ತುತಂತ್ರಜ್ಞಾನವನ್ನು ಬೋಧನೆ, ಸಂಶೋಧನೆ ಮತ್ತು ವಿಸ್ತರಣೆಯಲ್ಲಿ ಬೋಧನೆಗೆ ಅಳವಡಿಸಿಕೊಳ್ಳುವುದು, ವಿದೇಶಿ ವಿಶ್ವವಿದ್ಯಾಲಯ/ಸಂಸ್ಥೆಗಳೊಂದಿಗೆ ಸಹಯೋಜನೆ ಮಾಡಿಕೊಳ್ಳುವುದು.

6) ಬೋಧನೆಯ ಗುಣಾತ್ಮಕ ಸುಧಾರಣೆಗೆ ವಿದ್ಯಾರ್ಥಿಗಳಿಂದ ಇ–ಅಭಿಪ್ರಾಯ ಸಂಗ್ರಹಣೆ ವಿಧಾನ ಪ್ರಾರಂಭಿಸುವುದು.

7) ಕನ್ನಡದಲ್ಲಿ ರೈತಸ್ನೇಹಿ ಮೊಬೈಲ್ ಆಪ್‌ಗಳನ್ನು ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸುವುದು.

8) ಸಣ್ಣ ಮತ್ತು ಅತಿಸಣ್ಣ ರೈತರಿಗಾಗಿ ಕೃಷಿ ಸಲಕರಣೆಗಳನ್ನು ವಿನ್ಯಾಸಗೊಳಿಸುವುದು ಮತ್ತು ಅದರ ಬಳಕೆ ಉತ್ತೇಜಿಸುವುದು.

9) ಪರಿಸರ ಸ್ನೇಹಿ ಕ್ರಮವಾಗಿ ಇ–ಆಡಳಿತ ಕ್ರಮ ಅನುಸರಿಸುವುದು.

10) ವೈವಿಧ್ಯಮಯ ಕ್ಷೇತ್ರಗಳಲ್ಲಿ ಮೌಲ್ಯವರ್ಧಿತ ಉತ್ಪನ್ನಗಳನ್ನು ಬ್ರಾಂಡ್ ಮಾಡಿ ಜನಪ್ರಿಯಗೊಳಿಸುವುದು.

11) ಕೃಷಿ ಪ್ರವಾಸೋದ್ಯಮ ಸ್ಥಾಪನೆ

12) ಭಾರತೀಯ ಸಂಶೋಧನಾ ಮಾಹಿತಿ ಜಾಲದ ಸ್ಥಾಪನೆ (IRINS) ವೆಬ್ ಆಧಾರಿತ ಸಂಶೋಧನಾ ಮಾಹಿತಿ ನಿರ್ವಹಣೆ (RIM) ಸೇವೆಯು ಪ್ರಕ್ರಿಯೆಯಲ್ಲಿದೆ.

accomplish food security. Our research and developmental activities shall not only result in food security but provide nutritional security too. In addition, there must be systems to manage, to minimize the post-harvest losses to maximize the produce. Development of network between producer, markets and consumer is yet a challenging task. The betterment of this system contributes to unreached. Our university has the responsibility of moulding and capacity building among our graduates to think critically for contributing to the rural society, as well as the nation, and even at global level, towards maximizing food production. In precise, Learn, Earn and Return. Advanced technologies should be brought out and promoted by building knowledge base among scientific faculty. University is striving to adopt dynamic finance system to provide better governance for accounting and monitoring for overall development to bring paradigm shift in agricultural production system. The implementation of NEP-2020 is also a challenging process for the University.

**Future Focus of UAS, Bangalore**

1) Adoption of NEP-2020 for further strengthening of learning skill among students.
2) Automation of PG academic activities.
3) Virtual / Online education interventions to cope-up during emergencies.
4) Reintroduction of NCC in UG curriculum.
5) Application of ICT in teaching, research and extension; collaboration for teaching with foreign Universities / Institutions.
6) E-feedback mechanism from students towards quality improvement in teaching
7) Development of farmers' friendly 'Mobile Apps' in Kannada
8) Design and promotion of agricultural implements for small & marginal farmers.
9) E-governance / administration as a green initiative.
10) Branding and popularization of value-added products in diversified fields
11) Establishment of Agri-Tourisum
12) Establishment of Indian Research Information Network System (IRINS) web-based Research Information Management (RIM) service is Under Process

## 56ನೇ ಘಟಿಕೋತ್ಸವದಲ್ಲಿ ಪದವಿ ಹಾಗೂ ಪದಕಗಳ ಪ್ರದಾನ

ಶೈಕ್ಷಣಿಕ ವರ್ಷ–2020–21ರಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ 56ನೇ ಘಟಿಕೋತ್ಸವದಲ್ಲಿ ಒಟ್ಟಾರೆ 1144 ವಿದ್ಯಾರ್ಥಿಗಳಿಗೆ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ವಿಷಯಗಳಲ್ಲಿ ಪದವಿ ಪ್ರಧಾನ ಮಾಡಲಾಗುತ್ತಿದೆ. ಅದರಲ್ಲಿ 751 ವಿದ್ಯಾರ್ಥಿಗಳು ವಿವಿಧ ಸ್ನಾತಕ ಪದವಿಗಳನ್ನು, 304 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಹಾಗೂ 89 ವಿದ್ಯಾರ್ಥಿಗಳು ಡಾಕ್ಟೊರಲ್ ಪದವಿಗಳನ್ನು ಪಡೆಯಲಿದ್ದಾರೆ.

ಇದೇ ಸಮಾರಂಭದಂದು ಡಾಕ್ಟರ್ ಆಫ್ ಫಿಲಾಸೊಫಿ ಪದವಿಯಲ್ಲಿ ಒಟ್ಟು 30 ಚಿನ್ನದ ಪದಕಗಳನ್ನು ಪ್ರದಾನ ಮಾಡಲಿದ್ದು, ಅದರಲ್ಲಿ 13 ವಿದ್ಯಾರ್ಥಿನಿಯರು ಹಾಗೂ 7 ವಿದ್ಯಾರ್ಥಿಗಳು ಕೃಷಿ ವಿಶ್ವವಿದ್ಯಾನಿಲಯದ 15 ಚಿನ್ನದ ಪದಕಗಳನ್ನು, 11 ದಾನಿಗಳ ಚಿನ್ನದ ಪದಕಗಳು ಹಾಗೂ 4 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಹಂಚಿಕೊಂಡಿರುತ್ತಾರೆ.

ಸ್ನಾತಕೋತ್ತರ ಪದವಿಯಲ್ಲಿ ಒಟ್ಟು 72 ಚಿನ್ನದ ಪದಕಗಳನ್ನು ಪ್ರದಾನ ಮಾಡಲಿದ್ದು, ಅದರಲ್ಲಿ 23 ವಿದ್ಯಾರ್ಥಿನಿಯರು ಹಾಗೂ 7 ವಿದ್ಯಾರ್ಥಿಗಳು ಕೃಷಿ ವಿಶ್ವವಿದ್ಯಾನಿಲಯ ನೀಡುವ 22 ಚಿನ್ನದ ಪದಕಗಳು ಹಾಗೂ 5 ಆವರಣದ ಚಿನ್ನದ ಪದಕಗಳನ್ನು, 34 ದಾನಿಗಳ ಚಿನ್ನದ ಪದಕಗಳು ಹಾಗೂ 11 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಹಂಚಿಕೊಂಡಿರುತ್ತಾರೆ.

ಇದಲ್ಲದೆ, ಸ್ನಾತಕ ಪದವಿಯಲ್ಲಿ ಒಟ್ಟು 54 ಚಿನ್ನದ ಪದಕಗಳನ್ನು ಪ್ರದಾನ ಮಾಡಲಿದ್ದು, ಅದರಲ್ಲಿ 11 ವಿದ್ಯಾರ್ಥಿನಿಯರು ಹಾಗೂ 4 ವಿದ್ಯಾರ್ಥಿಗಳು ಕೃಷಿ ವಿಶ್ವವಿದ್ಯಾನಿಲಯ ನೀಡುವ 6 ಚಿನ್ನದ ಪದಕಗಳು, 3 ಆವರಣದ ಚಿನ್ನದ ಪದಕಗಳು, 1 ಕೃ.ವಿ.ವಿ.ಯ ಕ್ರೀಡಾ ಚಿನ್ನದ ಪದಕ, 36 ದಾನಿಗಳ ಚಿನ್ನದ ಪದಕಗಳು ಹಾಗೂ 8 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಹಂಚಿಕೊಂಡಿರುತ್ತಾರೆ.

56ನೇ ಘಟಿಕೋತ್ಸವ ಸಮಾರಂಭದಲ್ಲಿ ಒಟ್ಟಾರೆ 156 ಚಿನ್ನದ ಪದಕಗಳನ್ನು ಪಡೆಯಲಿದ್ದು ಅದರಲ್ಲಿ 18 ಬಾಲಕರಿಗೆ 11 ವಿಶ್ವವಿದ್ಯಾನಿಲಯದ ಚಿನ್ನದ ಪದಕ, 13 ದಾನಿಗಳ ಚಿನ್ನದ ಪದಕ ಹಾಗೂ 4 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಅದರಂತೆ 47 ವಿಧ್ಯಾರ್ಥಿನಿಯರಿಗೆ 41 ವಿಶ್ವವಿದ್ಯಾನಿಲಯದ ಚಿನ್ನದ ಪದಕ, 68 ದಾನಿಗಳ ಚಿನ್ನದ ಪದಕ ಹಾಗೂ 19 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಒಟ್ಟು 65 ವಿದ್ಯಾರ್ಥಿಗಳಿಗೆ 52 ವಿಶ್ವವಿದ್ಯಾನಿಲಯದ ಚಿನ್ನದ ಪದಕಗಳನ್ನು, 81 ದಾನಿಗಳ ಚಿನ್ನದ ಪದಕಗಳನ್ನು ಹಾಗೂ 23 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು.

*ಈ ಪ್ರಮುಖ ಸಂದರ್ಭದಲ್ಲಿ, ಪದವಿ ಪಡೆಯುತ್ತಿರುವ ಎಲ್ಲ ವಿದ್ಯಾರ್ಥಿಗಳನ್ನು ನಾನು ಅಭಿನಂದಿಸುತ್ತೇನೆ ಹಾಗೂ ಭವಿಷ್ಯದ ಅವರ ಆಯ್ಕೆಯ ಕ್ಷೇತ್ರದಲ್ಲಿ ಅವರಿಗೆ ಒಳ್ಳೆಯದಾಗಲೆಂದು ಹಾರೈಸುತ್ತೇನೆ*

*ಧನ್ಯವಾದಗಳು*

## AWARD OF DEGREES AND MEDALS DUIRNG 56$^{TH}$ CONVOCATION

During this 56$^{th}$ Convocation (Academic year 2020-21), a total of 1144 students are being conferred with various degrees, of which 751 students receives Bachelor's Degrees, 304 students with Master's Degrees and 89 students with Doctoral Degrees.

In Doctoral degree programmes, seven boys and 13 girl students have been awarded 15 University Gold Medals, 11 Donor's Gold Medals and four Donor's Gold Medals Certificates. In total 30 Gold Medals are being conferred

In Master's degree programmes, seven boys and 23 girl students are receiving 22 University Merit Gold Medals, five Campus Gold medals, 34 Donor's Gold Medals and 11 Donors Gold Medal Certificates. In total, 72 Gold Medals are being conferred.

In Undergraduate degree programmes, four boys and 11 girls are receiving six University Merit Gold Medals, three Campus Gold medals, one UAS Sports Gold Medal, 36 Donor's Gold Medals and eight Donors Gold Medal Certificates. In total, 54 Gold Medals are being conferred.

During 56$^{th}$ Convocation, a total number of 156 Gold Medals and Certificates are being awarded for 18 Boys with 11 UAS Gold Medals and 13 Donors Gold Medal and four Donors Gold Medal Certificates. As many as 47 Girls are being awarded with 41 UAS Gold Medals and 68 Donors Gold Medal and 19 Donors Gold Medal Certificates. Totally, 65 students are being awarded with 52 UAS Gold Medals and 81 Donors Gold Medal and 23 Donors Gold Medal Certificates.

*On this important occasion, I congratulate all the graduating students and wish them a great career ahead in their chosen fields*

***Thank you***